# ಭಾರತ ಭದ್ರತಾ ಪತ್ರಗಳ ಅಧಿನಿಯಮ, 1920

24.09.2001ರ ಭಾರತ ವಿಶೇಷ ರಾಜಪತ್ರದ IXನೇ ಭಾಗದ 1ನೇ ವಿಭಾಗದ 21ನೇ ಸಂಪುಟದ 1ನೇ ಸಂಚಿಕೆಯಲ್ಲಿ 10 ರಿಂದ 19ರ ವರೆಗಿನ ಪುಟಗಳಲ್ಲಿ ಪ್ರಕಟವಾಗಿದೆ.

## ವಿಷಯಾನುಕ್ರಮಣಿಕೆ

**ಪ್ರಕರಣಗಳು:**


1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ
2. ಪರಿಭಾಷೆ
3. ಉಪಬಂಧಿಸಿರುವಂತೆ ಹೊರತು ನ್ಯಾಸದ ಬಗ್ಗೆ ನೋಟೀಸನ್ನು ಸ್ವೀಕರಿಸತಕ್ಕದ್ದಲ್ಲ
4. ಸರ್ಕಾರಿ ಭದ್ರತಾ ಪತ್ರಗಳ ಜಂಟಿ ಅಥವಾ ಪ್ರತ್ಯೇಕ ಹಣ ಪಡೆಯುವವರ ಉತ್ತರ ಜೀವಿಗಳ ಹಕ್ಕು
5. ಹಿಂಬರಹಗಳನ್ನು ಭದ್ರತಾ ಪತ್ರದ ಮೇಲೆಯೇ ಮಾಡತಕ್ಕದ್ದು
6. ಸರ್ಕಾರಿ ಪದಗಳ ಧಾರಕನು ಸರ್ಕಾರಿ ಭದ್ರತಾ ಪತ್ರಗಳನ್ನು ಧಾರಣ ಮಾಡುವುದು
7. ದೇಶೀಯ ರಾಜ್ಯಗಳ ರಾಜರಿಗೆ ಭದ್ರತಾ ಪತ್ರಗಳನ್ನು ಕೊಡುವುದು
8. ಸರ್ಕಾರಿ ಭದ್ರತಾ ಪತ್ರಗಳ ಮೇಲೆ ಹಿಂಬರಹ ಮಾಡುವವನು ಅದರ ಮೊಬಲಗಿಗೆ ಹೊಣೆಗಾರನಾಗತಕ್ಕದ್ದಲ್ಲ.
9. ಸರ್ಕಾರಿ ಭದ್ರತಾ ಪತ್ರಗಳ ಮೇಲೆ ರುಜುವಿನ ಮುದ್ರೆ
10. ದ್ವಿಪ್ರತಿಯ ಭದ್ರತಾ ಪತ್ರಗಳನ್ನು ಕೊಡುವುದು
11. ಧಾರಕ ಬಂಧಪತ್ರಗಳ ನವೀಕರಣ
12. ಪ್ರಾಮಿಸರಿ ನೋಟುಗಳ ನವೀಕರಣ
13. ಸ್ವಾಮ್ಯದ ಬಗ್ಗೆ ವಿವಾದವಿರುವ ಸಂದರ್ಭದಲ್ಲಿ ಪ್ರಾಮಿಸರಿ ನೋಟುಗಳ ನವೀಕರಣ
14. ಇತರ ಭದ್ರತಾ ಪತ್ರಗಳ ನವೀಕರಣ
15. ಪರಿವರ್ತಿತ ಭದ್ರತಾ ಪತ್ರ ಇತ್ಯಾದಿಗಳನ್ನು ಕೊಡುವುದು
16. ನವೀಕರಿಸಿದ ಪ್ರಾಮಿಸರಿ ನೋಟ್ ಇತ್ಯಾದಿ ಸಂಬಂಧಿಸಿದಂತೆ ಹೊಣೆಗಾರಿಕೆ
17. ಕೆಲವು ಪ್ರಕರಣಗಳಲ್ಲಿ ತ್ವರಿತ ವಿಮೋಚನೆ
18. ಇತರ ಪ್ರಕರಣಗಳಲ್ಲಿ ವಿಮೋಚನೆ

18ಕ. ಬಡ್ಡಿಗೆ ಸಂಬಂಧಿಸಿದಂತೆ ವಿಮೋಚನೆ

19. ಐದು ಸಾವಿರ ರೂಪಾಯಿಗಳ ಮೌಲ್ಯವನ್ನು ಮೀರದ ಪತ್ರಗಳ ಧಾರಕನು ಮರಣ ಹೊಂದಿದ ಮೇಲೆ ಪ್ರಕ್ರಿಯೆ
20. ಅಪ್ರಾಪ್ತ ವಯಸ್ಕರು ಮತ್ತು ಮನೋವಿಕಲರು ಹೊಂದಿರುವ ಭದ್ರತಾ ಪತ್ರಗಳ ಸಂದರ್ಭದಲ್ಲಿ ಸಂದಾಯ
21. ನಷ್ಟಭರ್ತಿ
22. ದಸ್ತಾವೇಜುಗಳ ಪರಶೀಲನೆ
23. ದಂಡ
24. ನಿಯಮ ರಚನಾಧಿಕಾರ
25. ನಿರಸನಗಳು
26. ಭಾರತೀಯ ಭದ್ರತಾ ಪತ್ರಗಳ ಬಗ್ಗೆ ಉಪಬಂಧ

## ಭಾರತ ಭದ್ರತಾ ಪತ್ರಗಳ ಅಧಿನಿಯಮ, 1920

## (1920ರ ಅಧಿನಿಯಮ ಸಂಖ್ಯೆ 10)

(11ನೇ ಮಾರ್ಚ್ 1920)

**ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವ ಮತ್ತು ತಿದ್ದುಪಡಿ ಮಾಡುವ ಅಧಿನಿಯಮ.**

ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ಕಾನೂನನ್ನು ಕ್ರೋಡೀಕರಿಸುವುದು ಮತ್ತು ತಿದ್ದುಪಡಿ ಮಾಡುವುದು ವಿಹಿತವಾಗಿರುವುದರಿಂದ, ಈ ಮೂಲಕ ಈ ಕೆಳಕಂಡಂತೆ ಅಧಿನಿಯಮಿಸಲಾಗಿದೆ.

**1. ಚಿಕ್ಕ ಹೆಸರು, ವ್ಯಾಪ್ತಿ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಭಾರತ ಭದ್ರತಾ ಪತ್ರ ಅಧಿನಿಯಮ, 1920 ಎಂದು ಕರೆಯತಕ್ಕದ್ದು.

(2) ಯಾವ ರಾಜ್ಯ ಕ್ಷೇತ್ರಗಳು 1956ರ ನವೆಂಬರ್ ಒಂದರ ದಿನಾಂಕಕ್ಕೆ ನಿಕಟ ಪೂರ್ವದಲ್ಲಿ ಭಾಗ 'ಖ' ರಾಜ್ಯಗಳಲ್ಲಿ ಒಳಗೊಂಡಿದ್ದುವೋ ಆ ರಾಜ್ಯಕ್ಷೇತ್ರಗಳನ್ನು ಹೊರತುಪಡಿಸಿ ಇಡೀ ಭಾರತಕ್ಕೆ ಇದು ವ್ಯಾಪ್ತವಾಗುತ್ತದೆ.

(3) ಇದು 1920ರ ಏಪ್ರಿಲ್ ಮೊದಲನೇ ದಿವಸದಂದು ಜಾರಿಗೆ ಬರತಕ್ಕದ್ದು.

**2. ಪರಿಭಾಷೆ.–** ಈ ಅಧಿನಿಯಮದಲ್ಲಿ ವಿಷಯ ಅಥವಾ ಸಂದರ್ಭಕ್ಕೆ ತದ್ವಿರುದ್ಧವಾದುದು ಏನಾದರೂ ಇದ್ದ ಹೊರತು,–

(ಕ) "ಸರ್ಕಾರಿ ಭದ್ರತಾಪತ್ರ" ಎಂದರೆ ಪ್ರಾಮಿಸರಿ ನೋಟುಗಳು (ಖಜಾನೆ ಬಿಲ್ಲುಗಳನ್ನೂ ಒಳಗೊಂಡು), ಸ್ಟಾಕು ಪ್ರಮಾಣ ಪತ್ರಗಳು, ಧಾರಕ ಬಂಧಪತ್ರಗಳು ಮತ್ತು ಈ ಅಧಿನಿಯಮವನ್ನು ಅಂಗೀಕರಿಸುವುದಕ್ಕೆ ಮುಂಚೆಯೇ ಆಗಲಿ, ಅಥವಾ ಆ ತರುವಾಯವೇ ಆಗಲಿ ಕರಾರು ಮಾಡಿಕೊಂಡ ಯಾವುದೇ ಸಾಲಕ್ಕೆ ಸಂಬಂಧಿಸಿದಂತೆ ಯಾವುದೇ ಕಾಲದಲ್ಲಿ ಕೇಂದ್ರ ಸರ್ಕಾರವು ಅಥವಾ 1956ರ ನವೆಂಬರ್ ಒಂದಕ್ಕೆ ಮುಂಚೆ ಭಾಗ 'ಕ' ದ ಯಾವುದೇ ರಾಜ್ಯ ಸರ್ಕಾರವು ಅಥವಾ ಆ ದಿನಾಂಕದಂದು ಅಥವಾ ಅದರ ತರುವಾಯ ಒಂದು ರಾಜ್ಯ ಸರ್ಕಾರವು ಹೊರಡಿಸಿದ ಎಲ್ಲಾ ಇತರ ಭದ್ರತಾ ಪತ್ರಗಳು, ಆದರೆ ಅದು ಒಂದು ಕರೆನ್ಸಿ ನೋಟನ್ನು ಒಳಗೊಳ್ಳುವುದಿಲ್ಲ; ಮತ್ತು

(ಖ) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಗ) ಯಾವುದೇ ಸಾಲ ಅಥವಾ ಭದ್ರತಾ ಪತ್ರಕ್ಕೆ ಸಂಬಂಧಪಟ್ಟಂತೆ 'ಆ ಸರ್ಕಾರ' ಅಥವಾ 'ಸರ್ಕಾರ' ಎಂದರೆ ಆ ಸಾಲವನ್ನು ಎತ್ತುವ ಅಥವಾ ಭದ್ರತಾ ಪತ್ರವನ್ನು ಹೊರಡಿಸುವ ಸರ್ಕಾರ.

**3. ಉಪಬಂಧಿಸಿರುವಂತೆ ಹೊರತು ನ್ಯಾಸದ ಬಗ್ಗೆ ನೋಟೀಸನ್ನು ಸ್ವೀಕರಿಸತಕ್ಕದ್ದಲ್ಲ.–** (1) ಈ ಅಧಿನಿಯಮದಲ್ಲಿ ಅಥವಾ ಅದರ ಮೇರೆಗೆ ಅನ್ಯಥಾ ಉಪಬಂಧಿಸಿದಂತೆ ಹೊರತು ಯಾವುದೇ ಸರ್ಕಾರದ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಯಾವುದೇ ನ್ಯಾಸದ ಯಾವುದೇ ನೋಟೀಸನ್ನು ಸರ್ಕಾರವು ಸ್ವೀಕರಿಸತಕ್ಕದ್ದಲ್ಲ.

(2) ಸರ್ಕಾರವು, ನಿರ್ವಾಹಕ ಅಥವಾ ಆಡಳಿತಗಾರನು ಹಾಗೆಂದು ಸರ್ಕಾರಿ ಭದ್ರತಾ ಪತ್ರದ ಮೇಲೆ ಮಾಡಿದ ಹಿಂಬರಹವನ್ನು, ಅದು ಮನ್ನಣೆ ಮಾಡಿದೆ ಎಂಬ ಸಂಗತಿಯ ಕಾರಣ ಮಾತ್ರದಿಂದಲೇ, ಯಾವುದೇ ನ್ಯಾಸದ ಬಗ್ಗೆ ನೋಟೀಸನ್ನು ಸ್ವೀಕರಿಸಿರುವುದಾಗಿ ಭಾವಿಸತಕ್ಕದ್ದಲ್ಲ, ಅಥವಾ ಅದು ಯಾವ ಉಯಿಲಿನ ಮೂಲಕ ಅಂಥ ನಿರ್ವಾಹಕ ಅಥವಾ ಆಡಳಿತಗಾರನು ಬದ್ಧನಾಗಿರಬಹುದೋ ಆ ಯಾವುದೇ ಉಯಿಲಿನ ನಿಬಂಧನೆಗಳ

ಬಗ್ಗೆ ವಿಚಾರಿಸತಕ್ಕದ್ದಲ್ಲ, ಆದರೆ ಅಂಥ ನಿರ್ವಾಹಕ ಅಥವಾ ಆಡಳಿತಗಾರನ ಕ್ರಮಬದ್ಧ ನೇಮಕಾತಿಯ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ, ಅವನು ಯಾವ ವ್ಯಕ್ತಿಯನ್ನು ಪ್ರತಿನಿಧಿಸುವನೋ ಆ ವ್ಯಕ್ತಿಯ ಸಂಪದಕ್ಕೆ ಸೇರಿದ ಯಾವುದೇ ಸರ್ಕಾರಿ ಭದ್ರತಾ ಪತ್ರದ ಪೂರ್ಣ ಒಡೆಯನೆಂದು ಅವನನ್ನು ಪರಿಗಣಿಸಲು ಅದಕ್ಕೆ ಹಕ್ಕು ಇರತಕ್ಕದ್ದು.

**4. ಸರ್ಕಾರಿ ಭದ್ರತಾ ಪತ್ರಗಳ ಜಂಟಿ ಅಥವಾ ಪ್ರತ್ಯೇಕ ಹಣ ಪಡೆಯುವವರ ಉತ್ತರ ಜೀವಿಗಳ ಹಕ್ಕು.–** (1) ಭಾರತ ಕರಾರು ಅಧಿನಿಯಮ, 1872 (1872ರ IX)ರ 45ನೇ ಪ್ರಕರಣದಲ್ಲಿ ಏನೇ ಇದ್ದಾಗ್ಯೂ,–

(ಕ) ಒಂದು ಸರ್ಕಾರಿ ಭದ್ರತಾ ಪತ್ರವನ್ನು ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳಿಗೆ ಜಂಟಿಯಾಗಿ ಸಂದಾಯ ಮಾಡಬೇಕಾದಾಗ ಮತ್ತು ಆ ಇಬ್ಬರೂ ಅಥವಾ ಅವರಲ್ಲಿ ಯಾವನೇ ಒಬ್ಬನು ಮರಣ ಹೊಂದಿದಾಗ ಆ ಭದ್ರತಾ ಪತ್ರವನ್ನು ಆ ವ್ಯಕ್ತಿಗಳ ಉತ್ತರ ಜೀವಿ ಅಥವಾ ಉತ್ತರ ಜೀವಿಗಳಿಗೆ ಸಂದಾಯ ಮಾಡತಕ್ಕದ್ದು; ಮತ್ತು

(ಖ) ಒಂದು ಸರ್ಕಾರಿ ಭದ್ರತಾ ಪತ್ರವನ್ನು ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ವ್ಯಕ್ತಿಗಳಿಗೆ ಪ್ರತ್ಯೇಕವಾಗಿ ಸಂದಾಯ ಮಾಡಬೇಕಾದಾಗ ಮತ್ತು ಆ ಇಬ್ಬರು ಅಥವಾ ಅವರಲ್ಲಿ ಯಾವನೇ ಒಬ್ಬನು ಮರಣ ಹೊಂದಿದಾಗ ಆ ಭದ್ರತಾ ಪತ್ರವನ್ನು, ಆ ವ್ಯಕ್ತಿಗಳ ಉತ್ತರ ಜೀವಿ ಅಥವಾ ಉತ್ತರ ಜೀವಿಗಳಿಗೆ ಅಥವಾ ಮೃತನ ಪ್ರತಿನಿಧಿಗೆ ಅಥವಾ ಅವರಲ್ಲಿ ಯಾರಿಗಾದರೂ ಸಂದಾಯ ಮಾಡತಕ್ಕದ್ದು.

(2) ಈ ಪ್ರಕರಣವು, ಅಂಥ ಮರಣವು ಈ ಅಧಿನಿಯಮವು ಜಾರಿಗೆ ಬರುವುದಕ್ಕೆ ಮುಂಚೆ ಸಂಭವಿಸಿದ್ದರೆ ಅಥವಾ ಆ ತರುವಾಯ ಸಂಭವಿಸಿದರೆ ಅನ್ವಯವಾಗತಕ್ಕದ್ದು.

(3) ಇದರಲ್ಲಿ ಅಡಕವಾಗಿರುವುದು ಯಾವುದೂ, (1)ನೇ ಉಪಪ್ರಕರಣವು ಅನ್ವಯವಾಗುವಂಥ ಯಾವುದೇ ಭದ್ರತಾ ಪತ್ರದ ಅಡಿಯಲ್ಲಿ ಅಥವಾ ಅದಕ್ಕೆ ಸಂಬಂಧಿಸಿದಂತೆ ಆ ಉತ್ತರ ಜೀವಿ ಅಥವಾ ಉತ್ತರ ಜೀವಿಗಳ ವಿರುದ್ಧ ಮೃತ ವ್ಯಕ್ತಿಯ ಯಾವನೇ ಪ್ರತಿನಿಧಿಯು ಹೊಂದಿರಬಹುದಾದಂಥ ಯಾವುದೇ ಕ್ಲೇಮಿಗೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

(4) ಈ ಪ್ರಕರಣದ ಉದ್ದೇಶಗಳಿಗಾಗಿ, ಭಾರತ ಕಂಪನಿಗಳ ಅಧಿನಿಯಮ, 1913 (1913ರ VII)ರ ಮೇರೆಗೆ ಅಥವಾ ಸಹಕಾರಿ ಸಂಘಗಳ ಅಧಿನಿಯಮ, 1912 (1912ರ II)ರ ಮೇರೆಗೆ ಅಥವಾ ಭಾರತ ದೊಳಗಾಗಲಿ ಅಥವಾ ಅದರ ಹೊರಗಾಗಲಿ ವ್ಯಕ್ತಿಗಳ ಸಂಘಗಳ ನಿಗಮನಕ್ಕೆ ಸಂಬಂಧಪಟ್ಟಂತೆ ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಅಧಿನಿಯಮಿತಿಯ ಮೇರೆಗೆ ನಿಗಮಿತವಾದ ನಿಕಾಯವನ್ನು, ಅದು ವಿಘಟನೆಗೊಂಡಾಗ ಕೊನೆಗೊಂಡಿದೆ ಎಂದು ಭಾವಿಸತಕ್ಕದ್ದು.

**5. ಹಿಂಬರಹಗಳನ್ನು ಭದ್ರತಾ ಪತ್ರದ ಮೇಲೆಯೇ ಮಾಡತಕ್ಕದ್ದು.–** ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ XXVI)ರ 15ನೇ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ಸರ್ಕಾರಿ ಪ್ರಾಮಿಸರಿ ನೋಟಿನ ಮೇಲಿನ ಯಾವುದೇ ಹಿಂಬರಹವು ಆ ಭದ್ರತಾ ಪತ್ರದ ಹಿಂದೆ ಮಾತ್ರ ಬರೆದ ಧಾರಕನ ರುಜುವಿನ ಮೂಲಕ ಮಾಡಿದ್ದ ಹೊರತು ಸಿಂಧುವಾಗಿರತಕ್ಕದ್ದಲ್ಲ.

**6. ಸರ್ಕಾರಿ ಪದಗಳ ಧಾರಕನು ಸರ್ಕಾರಿ ಭದ್ರತಾ ಪತ್ರಗಳನ್ನು ಧಾರಣ ಮಾಡುವುದು.–** (1) ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಉಪಪ್ರಕರಣವು ಅನ್ವಯವಾಗವುದೆಂದು ಘೋಷಿಸಬಹುದಾದಂಥ ಯಾವುದೇ ಸರ್ಕಾರಿ ಪದದ ಸಂದರ್ಭದಲ್ಲಿ, ಒಂದು ಸರ್ಕಾರಿ ಭದ್ರತಾ ಪತ್ರವನ್ನು ಆ ಪದದ ಹೆಸರಿನಿಂದ ಆ ಪದದ ಧಾರಕನಿಗೆ ಅಥವಾ ಅವನ ಆದೇಶಕ್ಕನುಸಾರವಾಗಿ ಸಂದಾಯ ಮಾಡುವಂತೆ ಮಾಡಬಹುದು ಅಥವಾ ಹಿಂಬರಹ ಮಾಡಬಹುದು.

(2) ಒಂದು ಸರ್ಕಾರಿ ಭದ್ರತಾ ಪತ್ರವನ್ನು ಹಿಂದೆ ಹೇಳಿದಂತೆ ಮಾಡಿರುವಾಗ ಅಥವಾ ಹಿಂಬರಹ ಮಾಡಿದಾಗ, ಆ ಪದದ ಪ್ರತಿಯೊಬ್ಬ ಧಾರಕನಿಂದ ಆ ಪದದ ಉತ್ತರಾಧಿಕಾರಿಯಾದ ಧಾರಕನಿಗೆ ಯಾವುದೇ ಅಥವಾ ಹೆಚ್ಚಿನ ಹಿಂಬರಹವಿಲ್ಲದೆ ಆ ತರುವಾಯದ ವ್ಯಕ್ತಿಯು ಆ ಪದದ ಪ್ರಭಾರವನ್ನು ತೆಗೆದುಕೊಳ್ಳುವ ದಿನಾಂಕದಂದು ಮತ್ತು ಅಂದಿನಿಂದ ಅದನ್ನು ವರ್ಗಾಯಿಸಿರುವುದಾಗಿ ಭಾವಿಸತಕ್ಕದ್ದು.

(3) ಆ ಪದದ ಧಾರಕನು ಮೂರನೇ ಪಕ್ಷಕಾರನಿಗೆ ಹಿಂದೆ ಹೇಳಿದಂತೆ ಮಾಡಿರುವ ಅಥವಾ ಹಿಂಬರಹ ಮಾಡಿರುವ ಸರ್ಕಾರಿ ಭದ್ರತಾ ಪತ್ರವನ್ನು ಹಿಂಬರಹ ಮಾಡಿದಾಗ ಅವನು ಆ ಹಿಂಬರಹಕ್ಕೆ ಅವನ ಹೆಸರು ಮತ್ತು ಆ ಪದದ ಹೆಸರಿನೊಂದಿಗೆ ರುಜುಹಾಕತಕ್ಕದ್ದು.

(4) ಯಾವ ಸರ್ಕಾರೀ ಪದದ ಮೂಲಕ ಆ ಭದ್ರತಾ ಪತ್ರವನ್ನು ಆ ಪದದ ಹೆಸರಿನಿಂದ ಆ ಪದದ ಧಾರಕನಿಗೆ ಅಥವಾ ಅವನ ಆದೇಶಕ್ಕನುಸಾರವಾಗಿ ಸಂದಾಯ ಮಾಡಬೇಕೆಂದು ಮಾಡಲಾಗಿದೆಯೋ ಅಥವಾ ಮಾಡಲಾಗಿದ್ದಿತೋ ಅಥವಾ ಹಿಂಬರಹವನ್ನು ಮಾಡಲಾಗಿದೆಯೋ ಅಥವಾ ಮಾಡಲಾಗಿದ್ದಿತೋ ಆ ಸರ್ಕಾರಿ ಪದದ ಧಾರಕನ ಹೆಸರಿನಲ್ಲಿ ಈಗ ಇರುವ ಅಥವಾ ಇದುವರೆಗೂ ಇದ್ದ ಸರ್ಕಾರಿ ಭದ್ರತಾ ಪತ್ರದ ಮೇಲಿರುವ ಬರಹವು ಆ ಭದ್ರತಾ ಪತ್ರವನ್ನು ಹಾಗೆ ಮಾಡಿರುವ ಅಥವಾ ಹಿಂಬರಹ ಮಾಡಿರುವ ಕಾರಣ ಮಾತ್ರದಿಂದಲೇ ಅಸಿಂಧುವಾಗಿರುವುದಾಗಿ ಅಥವಾ ಅಸಿಂಧುವಾಗಿದ್ದುದಾಗಿ ಭಾವಿಸತಕ್ಕದ್ದಲ್ಲ.

(5) ಈ ಪ್ರಕರಣವು ಒಂಟಿ ಧಾರಕನಾಗಿರುವಂಥ ಪದಕ್ಕೆ ಅನ್ವಯವಾಗುವಂತೆಯೇ ಇಬ್ಬರು ಅಥವಾ ಅದಕ್ಕಿಂತ ಹೆಚ್ಚು ಜಂಟಿ ಧಾರಕನಾಗಿರುವಂಥ ಪದಕ್ಕೂ ಅನ್ವಯವಾಗುತ್ತದೆ.

**7. ದೇಶೀಯ ರಾಜ್ಯಗಳ ರಾಜರಿಗೆ ಭದ್ರತಾ ಪತ್ರಗಳನ್ನು ಕೊಡುವುದು.–** ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ XXVI)ರಲ್ಲಿ ಏನೇ ಇದ್ದಾಗ್ಯೂ, ಸರ್ಕಾರವು ಯಾವುದೇ ಸಾಲಕ್ಕೆ ಸಂಬಂಧಿಸಿದಂತೆ ಯಾವುದೇ ದೇಶೀಯ ರಾಜ್ಯದ ರಾಜರಿಗೆ ನಿಯಮಿಸಬಹುದಾದಂಥ ನಮೂನೆಯಲ್ಲಿ ಮತ್ತು ವರ್ಗಾವಣೀಯತೆ, ಉತ್ತರಾಧಿಕಾರ ಮತ್ತು ಇತರೆ ವಿಷಯಗಳ ಬಗೆಗಿನ ಷರತ್ತುಗಳಿಗೆ ಒಳಪಟ್ಟು ಸರ್ಕಾರಿ ಭದ್ರತಾಪತ್ರಗಳನ್ನು ಕೊಡಬಹುದು.

**8. ಸರ್ಕಾರಿ ಭದ್ರತಾ ಪತ್ರಗಳ ಮೇಲೆ ಹಿಂಬರಹ ಮಾಡುವವನು ಅದರ ಮೊಬಲಗಿಗೆ ಹೊಣೆಗಾರನಾಗತಕ್ಕದ್ದಲ್ಲ.–** ವರ್ಗಾವಣೀಯ ಲಿಖಿತಗಳ ಅಧಿನಿಯಮ, 1881 (1881ರ XXVI)ರಲ್ಲಿ ಏನೇ ಇದ್ದಾಗ್ಯೂ, ಒಬ್ಬ ವ್ಯಕ್ತಿಯು ಅವನು ಸರ್ಕಾರಿ ಭದ್ರತಾ ಪತ್ರದ ಮೇಲೆ ಹಿಂಬರಹ ಮಾಡಿರುವ ಕಾರಣ ಮಾತ್ರದಿಂದಲೇ, ಅದರ ಮೇರೆಗೆ ಅಸಲೆಂದು ಅಥವಾ ಬಡ್ಡಿಯೆಂದು ಬಾಕಿಯಾದ ಯಾವುದೇ ಹಣವನ್ನು ಸಂದಾಯ ಮಾಡಲು ಹೊಣೆಗಾರನಾಗತಕ್ಕದ್ದಲ್ಲ.

**9. ಸರ್ಕಾರಿ ಭದ್ರತಾ ಪತ್ರಗಳ ಮೇಲೆ ರುಜುವಿನ ಮುದ್ರೆ.–** ಸರ್ಕಾರದ ಪರವಾಗಿ ಸರ್ಕಾರಿ ಭದ್ರತಾ ಪತ್ರಗಳ ಮೇಲೆ ರುಜು ಮಾಡಲು ಅಧಿಕೃತಗೊಳಿಸಿರುವ ವ್ಯಕ್ತಿಯ ರುಜುವನ್ನು ಭದ್ರತಾ ಪತ್ರಗಳ ಮೇಲೆ ಮುದ್ರಣ ಮಾಡಬಹುದು, ಕೆತ್ತಬಹುದು ಅಥವಾ ಕಲ್ಲಚ್ಚಿನಿಂದ ಮುದ್ರಿಸಬಹುದು ಅಥವಾ ಸರ್ಕಾರವು ನಿರ್ದೇಶಿಸ ಬಹುದಾದಂಥ ಇತರ ಯಾಂತ್ರಿಕ ವಿಧಾನದ ಮೂಲಕ ಮುದ್ರಿಸಬಹುದು.

(2) ಹಾಗೆ ಮುದ್ರಣ ಮಾಡಿದ, ಕೆತ್ತಿದ, ಕಲ್ಲಚ್ಚಿನಿಂದ ಮುದ್ರಿಸಿದ ಅಥವಾ ಅನ್ಯಾಥಾ ಮುದ್ರಿಸಿದ ರುಜುವು, ಹಾಗೆ ಅಧಿಕೃತಗೊಳಿಸಿರುವ ವ್ಯಕ್ತಿಯ ಸರಿಯಾದ ಕೈಬರಹದಲ್ಲಿ ಅದನ್ನು ಬರೆಯಲಾಗಿದಿದ್ದರೆ ಹೇಗೋ ಹಾಗೆ ಸಿಂಧುವಾಗಿರತಕ್ಕದ್ದು.

**ದ್ವಿಪ್ರತಿಯ, ನವೀಕರಿಸಿದ, ಪರಿವರ್ತನೆಗೊಳಿಸಿದ, ಕ್ರೋಢೀಕರಿಸಿದ ಅಥವಾ ಉಪವಿಭಾಗಿಸಿದ ಭದ್ರತಾ ಪತ್ರಗಳನ್ನು ಕೊಡುವುದು.**

**10. ದ್ವಿಪ್ರತಿಯ ಭದ್ರತಾ ಪತ್ರಗಳನ್ನು ಕೊಡುವುದು.–** (1) ಸರ್ಕಾರಿ ಭದ್ರತಾ ಪತ್ರವು ಕಳೆದುಹೋಗಿದೆ, ಕಳುವಾಗಿದೆ ಅಥವಾ ಪೂರ್ಣವಾಗಿ ಅಥವಾ ಭಾಗಶಃ ನಾಶವಾಗಿದೆಯೆಂದು ಹೇಳಿದಾಗ ಮತ್ತು ಕಳೆದು ಹೋಗಿಲ್ಲದಿದ್ದರೆ, ಕಳುವಾಗಿಲ್ಲದಿದ್ದರೆ ಅಥವಾ ನಾಶವಾಗಿಲ್ಲದಿದ್ದರೆ ಯಾರಿಗೆ ಅದು ಸಂದಾಯವಾಗ ಬೇಕಾಗಿದ್ದಿತೋ ಆ ವ್ಯಕ್ತಿಯು ತಾನೆಂದು ಒಬ್ಬ ವ್ಯಕ್ತಿಯು ಕ್ಲೇಮ ಮಾಡಿದಾಗ, ಅವನು, ನಿಯಮಿಸಿದ ಪ್ರಾಧಿಕಾರಕ್ಕೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಮತ್ತು ಕಳೆದುಹೋಗಿರುವ ಬಗ್ಗೆ, ಕಳವು ಅಥವಾ ನಾಶದ ಬಗ್ಗೆ ಮತ್ತು ಆ ಕ್ಲೇಮಿನ ನ್ಯಾಯದ ಬಗ್ಗೆ ಅದಕ್ಕೆ ಮನದಟ್ಟಾಗುವಂತೆ ರುಜುವಾತನ್ನು ಹಾಜರುಪಡಿಸಿದ ಮೇಲೆ ಮತ್ತು ನಿಯಮಿಸಿದ ಫೀಜು ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡಿದ ಮೇಲೆ,–

(ಕ) ದ್ವಿಪ್ರತಿ ಭದ್ರತಾ ಪತ್ರವನ್ನು ಕೊಡುವವರಿಗೆ ಕಳೆದುಹೋಗಿದೆ, ಕಳುವಾಗಿದೆ, ನಾಶವಾಗಿದೆ ಎಂದು ಹೇಳಲಾದ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಬಡ್ಡಿಯ ಸಂದಾಯ; ಮತ್ತು

(ಖ) ಅರ್ಜಿದಾರನಿಗೆ ಸಂದಾಯ ಮಾಡಬೇಕಾದ ದ್ವಿಪ್ರತಿ ಭದ್ರತಾ ಪತ್ರವನ್ನು ಕೊಡುವುದು

– ಇವುಗಳ ಬಗ್ಗೆ ಆದೇಶವನ್ನು ಪ್ರಾಧಿಕಾರದಿಂದ ಪಡೆಯಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಒಂದು ಆದೇಶವನ್ನು, ಕಳೆದು ಹೋಗಿರುವ ಬಗ್ಗೆ, ಕಳವು ಅಥವಾ ನಾಶವಾಗಿರುವ ಬಗ್ಗೆ ನಿಯಮಿಸಿದ ಅಧಿಸೂಚನೆಯನ್ನು ಹೊರಡಿಸಿದ ತರುವಾಯ ಮಾಡತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಆದೇಶವನ್ನು ಮಾಡಿರುವಂಥ ಭದ್ರತಾ ಪತ್ರಗಳ ಒಂದು ಪಟ್ಟಿಯನ್ನು ನಿಯಮಿಸಿದ ರೀತಿಯಲ್ಲಿ ಪ್ರಕಟಿಸತಕ್ಕದ್ದು.

(4) ಯಾವ ಭದ್ರತಾ ಪತ್ರದ ಇಡೀಭಾಗವು ಕಳೆದುಹೋಗಿದೆ, ಕಳುವಾಗಿದೆ ಅಥವಾ ನಾಶವಾಗಿದೆ ಎಂದು ಹೇಳಲಾಗಿದೆಯೋ ಆ ಯಾವುದೇ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಹೊಣೆಗಾರಿಕೆಯಿಂದ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸರ್ಕಾರವು ವಿಮುಕ್ತಗೊಳ್ಳುವುದಕ್ಕೆ ಮುಂಚೆ ಯಾವುದೇ ಕಾಲದಲ್ಲಿ ಅಂಥ ಭದ್ರತಾ ಪತ್ರವು ಸಿಕ್ಕಿದರೆ ಈ ಪ್ರಕರಣದ ಮೇರೆಗೆ ಅದಕ್ಕೆ ಸಂಬಂಧಿಸಿದಂತೆ ಮಾಡಿದ ಯಾವುದೇ ಆದೇಶವನ್ನು ರದ್ದುಗೊಳಿಸತಕ್ಕದ್ದು.

**11. ಧಾರಕಬಂಧಪತ್ರಗಳ ನವೀಕರಣ.–** ಧಾರಕ ಬಂಧಪತ್ರದ ಅಥವಾ ಧಾರಕನಿಗೆ ಸಂದಾಯ ವಾಗಬೇಕಾದ ಇತರ ಸರ್ಕಾರಿ ಭದ್ರತಾ ಪತ್ರದ ಧಾರಕನು ನಿಯಮಿಸಿದ ಪ್ರಾಧಿಕಾರಕ್ಕೆ ಅರ್ಜಿಯನ್ನು ಮಾಡಿಕೊಂಡ ಮೇಲೆ, ಆ ಧಾರಕ ಬಂಧಪತ್ರ ಅಥವಾ ಇತರೆ ಭದ್ರತಾ ಪತ್ರವನ್ನು ಅಂಥ ಪ್ರಾಧಿಕಾರಕ್ಕೆ ವಶಾವಣೆ ಮಾಡಿ ನಿಯಮಿಸಿದ ಫೀಜು ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡಿದ ತರುವಾಯ ಆ ಪ್ರಾಧಿಕಾರದಿಂದ, ಸಂದರ್ಭಾನುಸಾರ ನವೀಕರಿಸಲಾದ ಧಾರಕ ಬಂಧಪತ್ರ ಅಥವಾ ಇತರ ಭದ್ರತಾ ಪತ್ರವನ್ನು ಪಡೆದುಕೊಳ್ಳಬಹುದು.

**12. ಪ್ರಾಮಿಸರಿ ನೋಟುಗಳ ನವೀಕರಣ.–** 13ನೇ ಪ್ರಕರಣದ ಉಪಬಂಧಗಳಿಗೆ ಒಳಪಟ್ಟು, ಸರ್ಕಾರಿ ಪ್ರಾಮಿಸರಿ ನೋಟಿಗೆ ಹಕ್ಕುಳ್ಳವನೆಂದು ಕ್ಲೇಮು ಮಾಡುವ ವ್ಯಕ್ತಿಯು ನಿಯಮಿಸಲಾದ ಪ್ರಾಧಿಕಾರಕ್ಕೆ ಅರ್ಜಿಯನ್ನು ಮಾಡಿಕೊಂಡ ಮೇಲೆ ಮತ್ತು ಅದಕ್ಕೆ ತನ್ನ ಕ್ಲೇಮಿನ ನ್ಯಾಯದ ಬಗ್ಗೆ ಮನದಟ್ಟು ಮಾಡಿಕೊಟ್ಟ ಮೇಲೆ ಮತ್ತು ನಿಯಮಿಸಿದ ರೀತಿಯಲ್ಲಿ ರಸೀದಿ ಕೊಟ್ಟಿರುವ ಆ ಪ್ರಾಮಿಸರಿ ನೋಟನ್ನು ವಶಾವಣೆ ಮಾಡಿ, ನಿಯಮಿಸಿದ ಫೀಜು, ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡಿದ ತರುವಾಯ ಅಂಥ ಪ್ರಾಧಿಕಾರದಿಂದ ತನಗೆ ಸಂದಾಯವಾಗಬೇಕಾದ ನವೀಕರಿಸಿದ ಪ್ರಾಮಿಸರಿ ನೋಟನ್ನು ಪಡೆದುಕೊಳ್ಳಬಹುದು:

ಪರಂತು, ಮಿತಾಕ್ಷರ ಕಾನೂನು ಅನ್ವಯವಾಗುವ ಹಿಂದೂ ಅವಿಭಕ್ತ ಕುಟುಂಬದ ಮೃತ ಸದಸ್ಯನ ಹೆಸರಿನಲ್ಲಿದೆಯೆಂದು ನಿಯಮಿಸಿದ ಪ್ರಾಧಿಕಾರಕ್ಕೆ ಕಂಡುಬರುವಂಥ ಸರ್ಕಾರಿ ಪ್ರಾಮಿಸರಿ ನೋಟಿನ ನವೀಕರಣಕ್ಕಾಗಿ ಅರ್ಜಿಯನ್ನು ಮಾಡಿಕೊಂಡಿರುವಾಗ ನವೀಕರಿಸಿದ ಪ್ರಾಮಿಸರಿ ನೋಟನ್ನು ಆ ಅರ್ಜಿದಾರನಿಗೆ, ಅವನು ಅಂಥ ಪ್ರಾಧಿಕಾರವು ರುಜು ಹಾಕಿದ ಪ್ರಮಾಣಪತ್ರವನ್ನು ಒದಗಿಸುವ ಹೊರತು ಮತ್ತು ಮಿತಾಕ್ಷರ ಕಾನೂನು ಅನ್ವಯವಾಗುವ ಹಿಂದೂ ಅವಿಭಕ್ತ ಕುಟುಂಬಕ್ಕೆ ಆ ಮೃತ ವ್ಯಕ್ತಿಯು ಸೇರಿದ್ದಾನೆಂಬ, ಆ ಪ್ರಾಮಿಸರಿ ನೋಟು ಆ ಕುಟುಂಬದ ಜಂಟಿ ಸ್ವತ್ತಿನ ಭಾಗವಾಗಿದ್ದಿತೆಂಬ ಮತ್ತು ಆ ಅರ್ಜಿದಾರನು ಆ ಕುಟುಂಬದ ವ್ಯವಸ್ಥಾಪಕ ಅಥವಾ ಏಕಮಾತ್ರ ಉತ್ತರ ಜೀವಿಯಾದ ಪುರುಷ ಸದಸ್ಯನಾಗಿದ್ದಾನೆ ಎಂಬ ಬಗ್ಗೆ ನಿಯಮಿಸಬಹುದಾದಂಥ ವಿಚಾರಣೆಯನ್ನು ನಡೆಸಿದ ತರುವಾಯ ಹೊರತು, ಕೊಡತಕ್ಕದ್ದಲ್ಲ.

**ವಿವರಣೆ:-** ಮಿತಾಕ್ಷರ ಕಾನೂನು ಅನ್ವಯಿಸುವ "ಹಿಂದೂ ಅವಿಭಕ್ತ ಕುಟುಂಬ" ಎಂಬ ಪದಾವಳಿಯು ಈ ಪ್ರಕರಣದ ಉದ್ದೇಶಗಳಿಗಾಗಿ "ಮಲಬಾರ್ ತಾರವಾಡ" ನನ್ನು ಒಳಗೊಳ್ಳುವುದಾಗಿ ಭಾವಿಸತಕ್ಕದ್ದು.

**13. ಸ್ವಾಮ್ಯದ ಬಗ್ಗೆ ವಿವಾದವಿರುವ ಸಂದರ್ಭದಲ್ಲಿ ಪ್ರಾಮಿಸರಿ ನೋಟುಗಳ ನವೀಕರಣ.-** (1) ಯಾವ ಪ್ರಾಮಿಸರಿ ನೋಟಿನ ನವೀಕರಣಕ್ಕಾಗಿ ಅರ್ಜಿಯನ್ನು ಮಾಡಿಕೊಳ್ಳಲಾಗಿದೆಯೋ ಆ ಸರ್ಕಾರಿ ಪ್ರಾಮಿಸರಿ ನೋಟಿನ ಬಗ್ಗೆ ವಿವಾದವಿರುವಲ್ಲಿ, ನಿಯಮಿಸಿದ ಪ್ರಾಧಿಕಾರವು,-

(ಕ) ಆ ವಿವಾದದ ಯಾವನೇ ಪಕ್ಷಕಾರನು ಅಂಥ ಪ್ರಾಮಿಸರಿ ನೋಟಿಗೆ ಹಕ್ಕುಳ್ಳುವನಾಗಿರುವನೆಂದು ಅವನನ್ನು ಘೋಷಿಸಲಾಗಿರುವ ಸಕ್ಷಮ ಅಧಿಕಾರ ವ್ಯಾಪ್ತಿಯ ನ್ಯಾಯಾಲಯದಿಂದ ಅಂತಿಮ ತೀರ್ಮಾನವನ್ನು ಪಡೆದುಕೊಂಡಿರುವಲ್ಲಿ, ಅಂಥ ಪಕ್ಷಕಾರನಿಗೆ ನವೀಕರಿಸಲಾದ ಪ್ರಾಮಿಸರಿ ನೋಟನ್ನು ಕೊಡಬಹುದು; ಅಥವಾ

(ಖ) ಅಂಥ ತೀರ್ಮಾನವನ್ನು ಪಡೆದುಕೊಳ್ಳುವವರೆಗೆ ಆ ಪ್ರಾಮಿಸರಿ ನೋಟನ್ನು ನವೀಕರಿಸಲು ನಿರಾಕರಿಸಬಹುದು; ಅಥವಾ

(ಗ) ಇಲ್ಲಿ ಇನ್ನು ಮುಂದೆ ಉಪಬಂಧಿಸಿರುವಂಥ ವಿಚಾರಣೆ ಮತ್ತು ಅದರ ಫಲಿತಾಂಶವನ್ನು ಪರ್ಯಾಲೋಚಿಸಿದ ತರುವಾಯ, ತನ್ನ ಅಭಿಪ್ರಾಯದಲ್ಲಿ ಯಾವ ಪಕ್ಷಕಾರನು ಅಂಥ ನೋಟಿಗೆ ಹಕ್ಕುಳವನಾಗಿರುವನೋ ಆ ಪಕ್ಷಕಾರನನ್ನು ಬರಹದಲ್ಲಿನ ಆದೇಶದ ಮೂಲಕ ಘೋಷಿಸಬಹುದು ಮತ್ತು ಅಂಥ ಘೋಷಣೆಯ ದಿನಾಂಕದಿಂದ ಮೂರು ತಿಂಗಳುಗಳು ಮುಕ್ತಾಯವಾದ ತರುವಾಯ, 12ನೇ ಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಅಂಥ ಪಕ್ಷಕಾರನಿಗೆ, ಆ ಅವಧಿಯೊಳಗೆ ಯಾವನೇ ವ್ಯಕ್ತಿಯು ಅಂಥ ನೋಟಿನ ಬಗ್ಗೆ ಸ್ವಾಮ್ಯವನ್ನು ಸ್ಥಾಪಿಸುವ ಉದ್ದೇಶಕ್ಕಾಗಿ ಸಕ್ಷಮ ಅಧಿಕಾರ ವ್ಯಾಪ್ತಿಯುಳ್ಳ ನ್ಯಾಯಾಲಯದಲ್ಲಿ ವ್ಯವಹರಣೆಯನ್ನು ಹೂಡಿದ್ದಾನೆ ಎಂದು ಅದು ನೋಟೀಸನ್ನು ಸ್ವೀಕರಿಸಿದ್ದ ಹೊರತು ನವೀಕರಿಸಿದ ನೋಟನ್ನು ಕೊಡಬಹುದು.

**ವಿವರಣೆ:-** ಈ ಉಪಪ್ರಕರಣದ ಉದ್ದೇಶಗಳಿಗಾಗಿ "ಅಂತಿಮ ತೀರ್ಮಾನ" ಎಂಬ ಪದಾವಳಿಗೆ ಅಪೀಲು ಮಾಡಿಕೊಳ್ಳಲಾಗದಂಥ ತೀರ್ಮಾನ ಅಥವಾ ಅಪೀಲು ಮಾಡಿಕೊಳ್ಳಬಹುದಾದಂಥ ಆದರೆ ಅದರ ವಿರುದ್ಧ ಕಾನೂನು ಅನುಮತಿಸಿರುವ ಕಾಲ ಪರಿಮಿತಿಯ ಅವಧಿಯೊಳಗೆ ಯಾವುದೇ ಅಪೀಲನ್ನು ದಾಖಲು ಮಾಡದೇ ಇರುವಂಥ ತೀರ್ಮಾನ ಎಂದು ಅರ್ಥವಿರುತ್ತದೆ.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ವಿಚಾರಣೆಯ ಉದ್ದೇಶಕ್ಕಾಗಿ, ನಿಯಮಿಸಿದ ಪ್ರಾಧಿಕಾರವು ಆ ಪಕ್ಷಕಾರನು ಹಾಜರುಪಡಿಸಬಹುದಾದಂಥ ಸಾಕ್ಷ್ಯವನ್ನು ಪೂರ್ತಿಯಾಗಿ ಅಥವಾ ಅದರ ಯಾವುದೇ ಭಾಗವನ್ನು ದಾಖಲು ಮಾಡಲು ತನ್ನ ಅಧಿಕಾರಿಗಳಲ್ಲಿ ಒಬ್ಬನಿಗೆ ನಿರ್ದೇಶಿಸಬಹುದು, ಅಥವಾ ದಾಖಲು ಮಾಡಲು ಅಥವಾ ದಾಖಲು ಮಾಡಿಸಿಕೊಳ್ಳಲು ಜಿಲ್ಲಾ ಮ್ಯಾಜಿಸ್ಟ್ರೇಟನನ್ನು ಕೋರಬಹುದು. ಅಂಥ ಕೋರಿಕೆಯನ್ನು ಜಿಲ್ಲಾ ಮ್ಯಾಜಿಸ್ಟ್ರೇಟನಿಗೆ ಮಾಡಿಕೊಂಡಿರುವಾಗ ಅಂಥ ಮ್ಯಾಜಸ್ಟ್ರೇಟನು ಆ ಸಾಕ್ಷ್ಯವನ್ನು ಖುದ್ದಾಗಿ ದಾಖಲು ಮಾಡಬಹುದು ಅಥವಾ ತನ್ನ ಅಧೀನದ ಮೊದಲನೇ ದರ್ಜೆಯ ಯಾವನೇ ಮ್ಯಾಜಿಸ್ಟ್ರೇಟನಿಗೆ ಅಥವಾ

ಈ ಬಗ್ಗೆ ಸರ್ಕಾರದ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಶಕ್ತಗೊಳಿಸಲಾದ ಎರಡನೇ ದರ್ಜೆಯ ಯಾವನೇ ಮ್ಯಾಜಿಸ್ಟ್ರೇಟನಿಗೆ ಅದನ್ನು ದಾಖಲು ಮಾಡಲು ನಿರ್ದೇಶಿಸಬಹುದು, ಮತ್ತು ಅದರ ಒಂದು ಪ್ರತಿಯನ್ನು ನಿಯಮಿಸಿದ ಪ್ರಾಧಿಕಾರಕ್ಕೆ ಕಳುಹಿಸತಕ್ಕದ್ದು.

**ವಿವರಣೆ:–** ಈ ಉಪಪ್ರಕರಣದ ಉದ್ದೇಶಗಳಿಗಾಗಿ "ಜಿಲ್ಲಾ ಮ್ಯಾಜಿಸ್ಟ್ರೇಟ್" ಎಂದರೆ ಪ್ರಾಮಿಸರಿ ನೋಟಿನ ಮೇಲೆ ಯಾವ ಸ್ಥಳದಲ್ಲಿ ಬಡ್ಡಿಯು ಸಂದಾಯವಾಗಬೇಕಾದೆಯೋ ಆ ಸ್ಥಳದಲ್ಲಿ ಅಧಿಕಾರ ವ್ಯಾಪ್ತಿಯನ್ನು ಹೊಂದಿರುವ ಜಿಲ್ಲಾ ಮ್ಯಾಜಿಸ್ಟ್ರೇಟ್ ಮತ್ತು ಪ್ರೆಸಿಡೆನ್ಸಿ ಪಟ್ಟಣದಲ್ಲಿ ಬಡ್ಡಿಯು ಸಂದಾಯವಾಗಬೇಕಾಗಿರುವಲ್ಲಿ, ಮುಖ್ಯ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟ್.

(3) ನಿಯಮಿಸಿದ ಪ್ರಾಧಿಕಾರದ ಅಧಿಕಾರಿಯು ಅಥವಾ ಈ ಪ್ರಕರಣದ ಮೇರೆಗೆ ಕಾರ್ಯ ನಿರ್ವಹಿಸುತ್ತಿರುವ ಯಾವನೇ ಮ್ಯಾಜಿಸ್ಟ್ರೇಟನು ಸೂಕ್ತವೆಂದು ಯೋಚಿಸಿದರೆ ಅವನು ಪ್ರಮಾಣ ವಚನದ ಮೇಲೆ ಸಾಕ್ಷ್ಯವನ್ನು ದಾಖಲು ಮಾಡಬಹುದು.

**14. ಇತರ ಭದ್ರತಾ ಪತ್ರಗಳ ನವೀಕರಣ.–** 11 ಮತ್ತು 12ನೇ ಪ್ರಕರಣಗಳಲ್ಲಿ ನಮೂದಿಸಿದುವುಗಳನ್ನು ಹೊರತುಪಡಿಸಿ ಇತರೆ ಸರ್ಕಾರಿ ಭದ್ರತೆಗಳನ್ನು, ನಿಯಮಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ನಿಯಮಿಸಬಹುದಾದಂಥ ರೀತಿಯಲ್ಲಿ ನವೀಕರಿಸಬಹುದು.

**15. ಪರಿವರ್ತಿತ ಭದ್ರತಾ ಪತ್ರ, ಇತ್ಯಾದಿಗಳನ್ನು ಕೊಡುವುದು.–** ನಿಯಮಿಸಿದ ಪ್ರಾಧಿಕಾರವು, ನಿಯಮಿಸಬಹುದಾದಂಥ ಷರತ್ತುಗಳಿಗೆ ಒಳಪಟ್ಟು, ಸರ್ಕಾರಿ ಭದ್ರತಾಪತ್ರ ಅಥವಾ ಭದ್ರತಾ ಪತ್ರಗಳಿಗೆ ಹಕ್ಕುಳ್ಳವನಾಗಿರುವನೆಂದು ಕ್ಲೇಮು ಮಾಡುವ ವ್ಯಕ್ತಿಯು ಮಾಡಿಕೊಂಡ ಅರ್ಜಿಯ ಮೇಲೆ ಆ ಕ್ಲೇಮಿನ ನ್ಯಾಯದ ಬಗ್ಗೆ ಮನದಟ್ಟು ಮಾಡಿಕೊಂಡ ಮೇಲೆ ಮತ್ತು ನಿಯಮಿಸಿದ ರೀತಿಯಲ್ಲಿ ರಸೀದಿ ಕೊಟ್ಟಿರುವ ಭದ್ರತಾ ಪತ್ರ ಅಥವಾ ಪತ್ರಗಳನ್ನು ವಶಾವಣೆ ಮಾಡಿದ ಮೇಲೆ ಮತ್ತು ನಿಯಮಿಸಿದ ಫೀಜು ಯಾವುದಾದರೂ ಇದ್ದರೆ ಅದನ್ನು ಸಂದಾಯ ಮಾಡಿದ ಮೇಲೆ, ಆ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳನ್ನು ಪರಿವರ್ತಿಸಬಹುದು, ಕ್ರೋಡೀಕರಿಸಬಹುದು ಅಥವಾ ಉಪವಿಭಾಗಿಸಬಹುದು ಮತ್ತು ತದನುಸಾರವಾಗಿ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳನ್ನು ಅರ್ಜಿದಾರನಿಗೆ ಕೊಡಬಹುದು.

(2) (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಲಾದ ಪರಿವರ್ತನೆ, ಕ್ರೋಡೀಕರಣ ಅಥವಾ ಉಪ ವಿಭಾಗಿಸುವುದನ್ನು ಅಂಥವೇ ಅಥವಾ ವಿಭಿನ್ನ ವರ್ಗಗಳ ಅಥವಾ ಅಂಥವೇ ಅಥವಾ ವಿಭಿನ್ನ ಸಾಲಗಳ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳಲ್ಲಿ ಹೂಡಬಹುದು.

**16. ನವೀಕರಿಸಿದ ಪ್ರಾಮಿಸರಿ ನೋಟು, ಇತ್ಯಾದಿಗೆ ಸಂಬಂಧಿಸಿದಂತೆ ಹೊಣೆಗಾರಿಕೆ.–** (1) ಯಾವನೇ ವ್ಯಕ್ತಿಗೆ 12ನೇ ಪ್ರಕರಣದ ಮೇರೆಗೆ ನವೀಕರಿಸಿದ ಸರ್ಕಾರಿ ಪ್ರಾಮಿಸರಿ ನೋಟನ್ನು ಕೊಟ್ಟಿರುವಾಗ ಅಥವಾ 15ನೇ ಪ್ರಕರಣದ ಮೇರೆಗೆ ಹೊಸ ಸರ್ಕಾರಿ ಪ್ರಾಮಿಸರಿ ನೋಟನ್ನು ಪರಿವರ್ತಿಸಿ, ಕ್ರೋಡೀಕರಿಸಿ ಅಥವಾ ಉಪವಿಭಾಗಿಸಿ ಕೊಟ್ಟಿರುವಾಗ ಹಾಗೆ ಕೊಟ್ಟ ನೋಟು ಆ ಸರ್ಕಾರ ಮತ್ತು ಅಂಥ ವ್ಯಕ್ತಿ ಹಾಗೂ ಅವನ ಮೂಲಕ ಆ ತರುವಾಯ ಸ್ವಾಮ್ಯವನ್ನು ಪಡೆಯುವ ಎಲ್ಲಾ ವ್ಯಕ್ತಿಗಳ ನಡುವೆ ಹೊಸ ಕರಾರನ್ನು ರಚಿಸುವುದಾಗಿ ಭಾವಿಸತಕ್ಕದ್ದು.

(2) ಯಾವುದೇ ಅಂಥ ನವೀಕರಣ, ಪರಿವರ್ತನೆ, ಕ್ರೋಡೀಕರಣ ಅಥವಾ ಉಪವಿಭಾಗಿಸುವಿಕೆಯು ಆ ಸರ್ಕಾರದ ವಿರುದ್ಧ ಹಾಗೆ ನವೀಕರಿಸಿದ, ಪರಿವರ್ತಿಸಿದ, ಕ್ರೋಡೀಕರಿಸಿದ ಅಥವಾ ಉಪವಿಭಾಗಿಸಿದ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳಿಗೆ ಯಾವನೇ ಇತರ ವ್ಯಕ್ತಿಗಿರುವ ಹಕ್ಕುಗಳಿಗೆ ಬಾಧಕವನ್ನುಂಟುಮಾಡತಕ್ಕುದ್ದಲ್ಲ.

**17. ಕೆಲವು ಪ್ರಕರಣಗಳಲ್ಲಿ ತ್ವರಿತ ವಿಮೋಚನೆ.–** ಸಂದಾಯವು ಬಾಕಿಯಾದ ದಿನಾಂಕದಂದು ಅಥವಾ ಆ ತರುವಾಯ 11ನೇ ಪ್ರಕರಣದ ಮೇರೆಗೆ ಧಾರಕ ಬಂಧಪತ್ರ ಅಥವಾ ಧಾರಕನಿಗೆ ಸಂದಾಯ ಮಾಡಬೇಕಾದ ಇತರ ಭದ್ರತಾ ಪತ್ರವನ್ನು ನವೀಕರಿಸಿದ ಮೇಲೆ ಅಥವಾ 13ನೇ ಪ್ರಕರಣದ ಮೇರೆಗೆ ಸರ್ಕಾರಿ ಪ್ರಾಮಿಸರಿ ನೋಟನ್ನು ನವೀಕರಿಸಿದ ಮೇಲೆ ಅಥವಾ 15ನೇ ಪ್ರಕರಣದ ಮೇರೆಗೆ ಧಾರಕ ಬಂಧಪತ್ರ ಅಥವಾ ಧಾರಕನಿಗೆ ಸಂದಾಯವಾಗಬೇಕಾದ ಇತರ ಭದ್ರತಾ ಪತ್ರವನ್ನು ಪರಿವರ್ತಿಸಿದ, ಕ್ರೋಡೀಕರಿಸಿದ, ಅಥವಾ ಉಪವಿಭಾಗಿಸಿದ ಮೇಲೆ ಅದರಲ್ಲಿ ವ್ಯಕ್ತಪಡಿಸಿದ ಮೊಬಲಗನ್ನು ಧಾರಕ ಬಂಧಪತ್ರ ಅಥವಾ ಧಾರಕನಿಗೆ ಸಂದಾಯ ಮಾಡಬೇಕಾದ ಇತರ ಸರ್ಕಾರಿ ಭದ್ರತಾ ಪತ್ರದ ಧಾರಕನಿಗೆ ಸರ್ಕಾರವು ಅಥವಾ ಅದರ ಪರವಾಗಿ ಸಂದಾಯ

ಮಾಡಿದ ಮೇಲೆ, ಆ ಸರ್ಕಾರವು ಅಂಥ ಧಾರಕ ಬಂಧಪತ್ರ, ಪ್ರಾಮಿಸರಿ ನೋಟು ಅಥವಾ ಇತರ ಭದ್ರತಾ ಪತ್ರವು ಧಾರಕನಿಗೆ ಸಂದಾಯ ಮಾಡಬೇಕಾದ ಪ್ರಾಮಿಸರಿ ನೋಟು ಆಗಿದ್ದಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಮತ್ತು ಅಷ್ಟರ ಮಟ್ಟಿಗೆ ವಿಮೋಚನೆಗೊಳ್ಳತಕ್ಕದ್ದು:

ಪರಂತು, 13ನೇ ಪ್ರಕರಣದ ಮೇರೆಗೆ ನವೀಕರಿಸಿದ ಸರ್ಕಾರಿ ಪ್ರಾಮಿಸರಿ ನೋಟಿನ ಸಂದರ್ಭದಲ್ಲಿ ಈ ಪ್ರಕರಣದಲ್ಲಿರುವುದು ಯಾವುದೂ, ಆ ಪ್ರಕರಣದ ಮೇರೆಗೆ ವ್ಯವಹರಣೆಗಳ ಬಗ್ಗೆ ನೋಟೀಸು ಇಲ್ಲದೆ ಇರುವ ಅಥವಾ ಯಾವನೇ ಅಂಥ ವ್ಯಕ್ತಿಯ ಮೂಲಕ ಸ್ವಾಮ್ಯವನ್ನು ಪಡೆಯುವ ಯಾವನೇ ವ್ಯಕ್ತಿಯು ಅಂಥ ನೋಟಿಗೆ ಸಂಬಂಧಿಸಿದಂತೆ ಸರ್ಕಾರದ ವಿರುದ್ಧ ಮಾಡುವ ಕ್ಲೇಮನ್ನು ಪ್ರತಿಷೇಧಿಸುವುದಾಗಿ ಭಾವಿಸತಕ್ಕದ್ದಲ್ಲ.

**18. ಇತರ ಪ್ರಕರಣಗಳಲ್ಲಿ ವಿಮೋಚನೆ.–** ಈ ಅಧಿನಿಯಮದಲ್ಲಿ ಅನ್ಯಥಾ ಉಪಬಂಧಿಸಿದಂತೆ ಹೊರತು,–

(i) ಸಂದಾಯವು ಬಾಕಿಯಾಗುವಂಥ ದಿನಾಂಕದಂದು ಅಥವಾ ಆ ತರುವಾಯ ಸರ್ಕಾರಿ ಭದ್ರತಾ ಪತ್ರದ ಬಗ್ಗೆ ಬಾಕಿಯಾದ ಮೊಬಲಗನ್ನು ಸಂದಾಯ ಮಾಡಿದ ಮೇಲೆ; ಅಥವಾ

(ii) 10ನೇ ಪ್ರಕರಣದ ಮೇರೆಗೆ ದ್ವಿಪ್ರತಿ ಭದ್ರತಾ ಪತ್ರವನ್ನು ಕೊಟ್ಟಿರುವಾಗ; ಅಥವಾ

(iii) 12ನೇ ಪ್ರಕರಣದ ಅಥವಾ 13ನೇ ಪ್ರಕರಣದ ಮೇರೆಗೆ ನವೀಕರಿಸಿದ ಭದ್ರತಾ ಪತ್ರವನ್ನು ಕೊಟ್ಟಿರುವಾಗ ಅಥವಾ ಹೊಸ ಭದ್ರತಾ ಪತ್ರಗಳನ್ನು 15ನೇ ಪ್ರಕರಣದ ಮೇರೆಗೆ ಪರಿವರ್ತಿಸಿ, ಕ್ರೋಡೀಕರಿಸಿ ಅಥವಾ ಉಪವಿಭಾಗಿಸಿದ ನಂತರ ಕೊಟ್ಟಿರುವಾಗ

– ಸರ್ಕಾರವು ಹಾಗೆ ಸಂದಾಯ ಮಾಡಿದ ಅಥವಾ ಯಾವುದಕ್ಕೆ ಬದಲಾಗಿ ದ್ವಿಪ್ರತಿಯ ನವೀಕರಿಸಿದ ಅಥವಾ ಹೊಸ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳನ್ನು ಕೊಡಲಾಗಿದೆಯೋ ಆ ಭದ್ರತಾ ಪತ್ರಕ್ಕೆ ಅಥವಾ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ ಎಲ್ಲಾ ಹೊಣೆಗಾರಿಕೆಯಿಂದ:–

(ಕ) ಸಂದಾಯವಾದ ಸಂದರ್ಭದಲ್ಲಿ ಸಂದಾಯವು ಬಾಕಿಯಾದಂಥ ದಿನಾಂಕದಿಂದ ಆರು ವರ್ಷಗಳು ಗತಿಸಿದ ತರುವಾಯ;

(ಖ) ದ್ವಿಪ್ರತಿ ಭದ್ರತಾ ಪತ್ರದ ಸಂದರ್ಭದಲ್ಲಿ ಆ ಭದ್ರತಾ ಪತ್ರವನ್ನು ಮೊದಲು ನಮೂದಿಸಿರುವಂಥ ಪಟ್ಟಿಯನ್ನು 10ನೇ ಪ್ರಕರಣದ (3)ನೇ ಉಪಪ್ರಕರಣದ ಮೇರೆಗೆ ಪ್ರಕಟಣೆಯ ದಿನಾಂಕ ಅಥವಾ ಮೂಲ ಭದ್ರತಾ ಪತ್ರದ ಬಗ್ಗೆ ಕೊನೆಯದಾಗಿ ಬಡ್ಡಿಯು ಸಂದಾಯದ ದಿನಾಂಕ ಇವುಗಳಲ್ಲಿ ಯಾವುದು ತರುವಾಯದ್ದೋ ಅಂದಿನಿಂದ ಆರು ವರ್ಷಗಳು ಗತಿಸಿದ ತರುವಾಯ;

(ಗ) ನವೀಕರಿಸಿದ ಭದ್ರತಾ ಪತ್ರದ ಅಥವಾ ಪರಿವರ್ತನೆ, ಕ್ರೋಡೀಕರಣ ಅಥವಾ ಉಪವಿಭಾಗಿಸುವುದು – ಇವುಗಳ ನಂತರ ಕೊಟ್ಟ ಹೊಸ ಭದ್ರತಾ ಪತ್ರದ ಸಂದರ್ಭದಲ್ಲಿ ಅವುಗಳನ್ನು ಕೊಟ್ಟ ದಿನಾಂಕದಿಂದ ಆರು ವರ್ಷಗಳು ಗತಿಸಿದ ತರುವಾಯ;

– ಸರ್ಕಾರವು ವಿಮೋಚನೆಗೊಳ್ಳತಕ್ಕದ್ದು.

**18ಕ. ಬಡ್ಡಿಗೆ ಸಂಬಂಧಿಸಿದಂತೆ ವಿಮೋಚನೆ.–** ಸರ್ಕಾರಿ ಭದ್ರತಾ ಪತ್ರದ ನಿಬಂಧನೆಗಳಲ್ಲಿ ಸ್ಪಷ್ಟವಾಗಿ ಅನ್ಯಥಾ ಉಪಬಂಧಿಸಿದಂತೆ ಹೊರತು, ಯಾವನೇ ವ್ಯಕ್ತಿಯು, ಅಂಥ ಭದ್ರತಾ ಪತ್ರದ ಬಗ್ಗೆ ಬಾಕಿಯಾದ ಮೊಬಲಗನ್ನು ಸಂದಾಯ ಮಾಡುವಂತೆ ತಗಾದೆ ಮಾಡಬಹುದಾಗಿದ್ದಂಥ ಅತಿ ಮುಂಚಿನ ದಿನಾಂಕದ ತರುವಾಯ ಗತಿಸಿರುವಂಥ ಯಾವುದೇ ಅವಧಿಗೆ ಸಂಬಂಧಿಸಿದಂತೆ ಯಾವುದೇ ಅಂಥ ಭದ್ರತಾ ಪತ್ರದ ಬಗ್ಗೆ ಬಡ್ಡಿಯನ್ನು ಕ್ಲೇಮು ಮಾಡಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

## ಕೆಲವು ಪ್ರಕರಣಗಳಲ್ಲಿ ಕ್ಷಿಪ್ರ ಪ್ರಕ್ರಿಯೆ

**19. ಐದು ಸಾವಿರ ರೂಪಾಯಿಗಳ ಮೌಲ್ಯವನ್ನು ಮೀರಿದ ಭದ್ರತಾ ಪತ್ರಗಳ ಧಾರಕನು ಮರಣ ಹೊಂದಿದ ಮೇಲೆ ಪ್ರಕ್ರಿಯೆ.–** (1) ಯಾವ ಸರ್ಕಾರಿ ಭದ್ರತಾ ಪತ್ರದ ನಾಮಮಾತ್ರ ಅಥವಾ ಮುಖಬೆಲೆಯು ಒಟ್ಟಿನಲ್ಲಿ ಐದು ಸಾವಿರ ರೂಪಾಯಿಗಳನ್ನು ಮೀರುವುದಿಲ್ಲವೋ ಆ ಸರ್ಕಾರಿ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳಿಗೆ (ಧಾರಕನಿಗೆ ಸಂದಾಯ ಮಾಡಬೇಕಾದ ಭದ್ರತಾ ಪತ್ರವನ್ನು ಹೊರತುಪಡಿಸಿ) ಹಕ್ಕುಳ್ಳವನಾಗಿದ್ದ ವ್ಯಕ್ತಿಯು ಮರಣ ಹೊಂದಿದ ಆರು ತಿಂಗಳುಗಳೊಳಗೆ ಅಂಥ ವ್ಯಕ್ತಿಯ ಸಂಪದದ ಬಗ್ಗೆ ಮರಣ ಶಾಸನದ ಪ್ರೋಬೇಟು ಅಥವಾ ಆಡಳಿತಾಧಿಕಾರ ಪತ್ರ ಅಥವಾ ಉತ್ತರಾಧಿಕಾರ ಪ್ರಮಾಣಪತ್ರ ಅಧಿನಿಯಮ, 1889 (1889ರ VII)ರ ಮೇರೆಗೆ ಕೊಟ್ಟ ಪ್ರಮಾಣಪತ್ರವನ್ನು ನಿಯಮಿಸಿದ ಪ್ರಾಧಿಕಾರಕ್ಕೆ ಹಾಜರುಪಡಿಸದಿದ್ದರೆ ಅಂಥ ಪ್ರಾಧಿಕಾರವು 13ನೇ ಪ್ರಕರಣದ (2) ಮತ್ತು (3)ನೇ ಉಪಪ್ರಕರಣಗಳಲ್ಲಿ ಉಪಬಂಧಿಸಿದ ರೀತಿಯಲ್ಲಿ ವಿಚಾರಣೆ ನಡೆಸಿದ ತರುವಾಯ ಯಾವ ವ್ಯಕ್ತಿಯು ಆ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳಿಗೆ ಅಥವಾ ಮೃತನ ಸಂಪದದ ಆಡಳಿತವನ್ನು ನಡೆಸಲು ಹಕ್ಕುಳ್ಳವನಾಗಿರುವನೋ ಆ ವ್ಯಕ್ತಿಯ ಬಗ್ಗೆ ನಿರ್ಧರಿಸಬಹುದು; ಮತ್ತು

(ಕ) ಮರು ಸಂದಾಯಕ್ಕಾಗಿ ಬಾಕಿಯಾದ ಸಾಲಕ್ಕೆ ಸಂಬಂಧಪಟ್ಟಂತೆ ಯಾವುದೇ ಭದ್ರತೆಯ ಸಂದರ್ಭದಲ್ಲಿ ಅಂಥ ವ್ಯಕ್ತಿಗೆ ಅದರ ಬಗ್ಗೆ ಬಾಕಿಯಾದ ಮೊಬಲಗಿನ ಸಂದಾಯವನ್ನು ಅಧಿಕೃತಗೊಳಿಸಬಹುದು; ಮತ್ತು

(ಖ) ಮರು ಸಂದಾಯಕ್ಕಾಗಿ ಬಾಕಿಯಾಗಿಲ್ಲದ ಸಾಲಕ್ಕೆ ಸಂಬಂಧಪಟ್ಟಂತೆ ಯಾವುದೇ ಅಂಥ ಭದ್ರತೆಯ ಸಂದರ್ಭದಲ್ಲಿ, ಪ್ರಾಮಿಸರಿ ನೋಟಿನ ಸಂದರ್ಭದಲ್ಲಿ ಅಂಥ ವ್ಯಕ್ತಿಯ ಪರವಾಗಿ ಅಂಥ ಪ್ರಾಮಿಸರಿ ನೋಟಿನ ನವೀಕರಣವನ್ನು, ಅಥವಾ ಸ್ಟಾಕಿನ ಸಂದರ್ಭದಲ್ಲಿ ಮೃತನ ಹೆಸರಿಗೆ ಬದಲಾಗಿ ಅಂಥ ವ್ಯಕ್ತಿಯ ಹೆಸರಿನ ನೋಂದಣಿಯನ್ನು ಅಧಿಕೃತಗೊಳಿಸಬಹುದು.

(2) (1)ನೇ ಉಪಪ್ರಕರಣಕ್ಕೆ ಅನುಸಾರವಾಗಿ ಯಾವುದೇ ಪ್ರಾಮಿಸರಿ ನೋಟನ್ನು ಸಂದಾಯ ಮಾಡಿದ ಅಥವಾ ನವೀಕರಿಸಿದ ಮೇಲೆ ಸರ್ಕಾರವು, ಹಾಗೆ ಸಂದಾಯ ಮಾಡಿದ ಅಥವಾ ನವೀಕರಿಸಿದ ಪ್ರಾಮಿಸರಿ ನೋಟಿಗೆ ಸಂಬಂಧಿಸಿದಂತೆ ಎಲ್ಲಾ ಹೊಣೆಗಾರಿಕೆಯಿಂದ ವಿಮೋಚನೆಗೊಳ್ಳತಕ್ಕದ್ದು ಮತ್ತು (1)ನೇ ಉಪಪ್ರಕರಣದ (ಖ) ಖಂಡಕ್ಕೆ ಅನುಸಾರವಾಗಿ ಮಾಡಿದ ಹೆಸರುಗಳ ಯಾವುದೇ ಬದಲಾವಣೆಯು ಸರ್ಕಾರದ ವಿರುದ್ಧ ಇರುವ ಯಾವುದೇ ಕ್ಲೇಮಿನ ಉದ್ದೇಶಗಳಿಗಾಗಿ ಅದನ್ನು ಮಾಡಿರುವಂಥ ಸ್ಟಾಕಿನ ಸಿಂಧುವಾದ ವರ್ಗಾವಣೆ ಯಾಗಿರುವುದಾಗಿ ಭಾವಿಸತಕ್ಕದ್ದು.

(3) ಮೃತನ ಸಂಪದದ ವಿರುದ್ಧ, ಯಾವನೇ ಸಾಲ ಕೊಟ್ಟವನು ಅಥವಾ ಕ್ಲೇಮುದಾರನು, (1)ನೇ ಉಪಪ್ರಕರಣದ ಮೇರೆಗೆ ಯಾವನೇ ವ್ಯಕ್ತಿಗೆ ಸಂದಾಯ ಮಾಡಿದ ಮತ್ತು ಆಡಳಿತಕ್ಕೆ ಒಳಪಡದೆ ಅವನ ಬಳಿ ಉಳಿದಿರುವ ಹಣದಿಂದ ಅವನ ಋಣ ಅಥವಾ ಕ್ಲೇಮನ್ನು ಸದರಿ ವ್ಯಕ್ತಿಯು ಮೃತನ ಸಂಪದದ ಬಗ್ಗೆ ಆಡಳಿತಾಧಿಕಾರ ಪತ್ರವನ್ನು ಪಡೆದುಕೊಂಡಿದ್ದರೆ ಹೇಗೋ ಹಾಗೆ ಅದೇ ರೀತಿಯಲ್ಲಿ ಮತ್ತು ಅಷ್ಟರಮಟ್ಟಿಗೆ ವಸೂಲು ಮಾಡಬಹುದು ಮತ್ತು ಈ ಪ್ರಕರಣದಲ್ಲಿ ಇರುವುದು ಯಾವುದೂ, ಮೃತನ ಸಂಪದದ ಬಗ್ಗೆ ಆಡಳಿತ ನಡೆಸುವ ಯುಕ್ತ ಕ್ರಮದಲ್ಲಿ ಅವನು ಕಾನೂನು ಸಮ್ಮತವಾಗಿ ಸಂದಾಯ ಮಾಡಿರುವ ಮೊಬಲಗುಗಳನ್ನು ವಸೂಲು ಮಾಡುವ ಸಂಬಂಧದ ಕ್ಲೇಮನ್ನು ಹೊರತುಪಡಿಸಿ, ಅಂಥ ವ್ಯಕ್ತಿಯ ವಿರುದ್ಧ ಮೃತನ ನಿರ್ವಾಹಕ ಅಥವಾ ಆಡಳಿತಗಾರ ಅಥವಾ ಇತರ ಪ್ರತಿನಿಧಿಗೆ ಇರುವ ಯಾವುದೇ ಕ್ಲೇಮಿಗೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

## ಅಪ್ರಾಪ್ತ ವಯಸ್ಕರು ಮತ್ತು ಮನೋವಿಕಲರು ಹೊಂದಿರುವ ಭದ್ರತಾಪತ್ರಗಳು

**20. ಅಪ್ರಾಪ್ತ ವಯಸ್ಕರು ಮತ್ತು ಮನೋವಿಕಲರು ಹೊಂದಿರುವ ಭದ್ರತಾಪತ್ರಗಳ ಸಂದರ್ಭದಲ್ಲಿ ಸಂದಾಯ.–** ಸರ್ಕಾರಿ ಭದ್ರತಾ ಪತ್ರವು ಅಪ್ರಾಪ್ತ ವಯಸ್ಕನಾಗಿರುವ ಅಥವಾ ಮತಿ ವಿಕಲನಾಗಿರುವ ಮತ್ತು ತನ್ನ ವ್ಯವಹಾರಗಳನ್ನು ನಿರ್ವಹಿಸಲು ಅಸಮರ್ಥನಾಗಿರುವ ವ್ಯಕ್ತಿಯ ಹೆಸರಿನಲ್ಲಿರುವಲ್ಲಿ ಅಥವಾ ಅವನು ಭದ್ರತಾ ಪತ್ರವನ್ನು ಧಾರಣ ಮಾಡಿರುವಲ್ಲಿ ಅದರ ಮೇಲೆ ಒದಗಿಸಿರುವ ಬಡ್ಡಿ ಅಥವಾ ಆ ಸಾಲವು ವಾಯಿದೆ ತುಂಬಿದ ಅಥವಾ ಅದರ ತೀರುವಳಿಯ ಮೇಲೆ ಅದಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡಬೇಕಾದ ಬಂಡವಾಳ ಮೊತ್ತವನ್ನು, ಸಂದಾಯ ಮಾಡಬೇಕಾದ ಬಡ್ಡಿಯ ಸಂದರ್ಭದಲ್ಲಿ ಆ ಭದ್ರತಾ ಪತ್ರದ ನಾಮಮಾತ್ರ ಮೌಲ್ಯವು

ಅಥವಾ ಇತರ ಸಂದರ್ಭಗಳಲ್ಲಿ ಸಂದಾಯ ಮಾಡಬೇಕಾದ ಮೊತ್ತವು-ಐದು ಸಾವಿರ ರೂಪಾಯಿಗಳನ್ನು ಮೀರದೆ ಇರುವಲ್ಲಿ, ನಿಯಮಿಸಬಹುದಾದಂಥ ರೀತಿಯಲ್ಲಿ ಸಂದಾಯ ಮಾಡತಕ್ಕದು ಮತ್ತು ಹಾಗೆ ಸಂದಾಯ ಮಾಡಿದ ಮೇಲೆ ಸರ್ಕಾರವು, ತದ್ವಿರುದ್ದವಾಗಿ ಯಾವುದೇ ಅಧಿನಿಯಮಿತಿಯ ಯಾವುದೇ ಉಪಬಂಧವಿದ್ದಾಗ್ಯೂ ತನಗೆ ಸಂಬಂಧಿಸಿದ ಎಲ್ಲಾ ಹೊಣೆಯಿಂದ ವಿಮೋಚನೆಗೊಳ್ಳತಕ್ಕದ್ದು.

### ನಷ್ಟಭರ್ತಿ

**21. ನಷ್ಟಭರ್ತಿ.–** 10, 12, 13 ಅಥವಾ 15ನೇ ಪ್ರಕರಣದಲ್ಲಿ ಏನೇ ಇದ್ದಾಗ್ಯೂ, ನಿಯಮಿಸಿದ ಪ್ರಾಧಿಕಾರವು, ಆ ಯಾವುದೇ ಪ್ರಕರಣದ ಮೇರೆಗೆ ಉದ್ಭವಿಸುವ ಯಾವುದೇ ಕ್ಲೇಮಿನ ಸಂದರ್ಭದಲ್ಲಿ,–

(i) ಸಂದರ್ಭಾನುಸಾರ ಮೂಲ ಭದ್ರತಾ ಪತ್ರದ ಮೇರೆಗೆ ಅಥವಾ ಹಾಗೆ ನವೀಕರಿಸಿದ, ಪರಿವರ್ತಿಸಿದ, ಕ್ರೋಡೀಕರಿಸಿದ ಅಥವಾ ಉಪವಿಭಾಗಿಸಿದ ಭದ್ರತಾ ಪತ್ರದ ಅಥವಾ ಭದ್ರತಾ ಪತ್ರಗಳ ಮೇರೆಗೆ ಕ್ಲೇಮು ಮಾಡುವ ಎಲ್ಲಾ ವ್ಯಕ್ತಿಗಳ ಕ್ಲೇಮುಗಳ ವಿರುದ್ಧ ಅರ್ಜಿದಾರನು ನಿಯಮಿಸಿದ ನಷ್ಟಭರ್ತಿಯನ್ನು ತುಂಬಿಕೊಟ್ಟ ಮೇಲೆ ದ್ವಿಪ್ರತಿಯನ್ನು ಅಥವಾ ನವೀಕರಿಸಿದ ಭದ್ರತಾ ಪತ್ರವನ್ನು ಕೊಡಬಹುದು ಅಥವಾ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳನ್ನು ಪರಿವರ್ತಿಸಬಹುದು, ಕ್ರೋಡೀಕರಿಸಬಹುದು ಅಥವಾ ಉಪವಿಭಾಗಿಸಬಹುದು; ಅಥವಾ

(ii) ಅಂಥ ನಷ್ಟಭರ್ತಿಯನ್ನು ತುಂಬಿಕೊಟ್ಟ ಹೊರತು, ದ್ವಿಪ್ರತಿ ಅಥವಾ ನವೀಕರಿಸಿದ ಭದ್ರತಾ ಪತ್ರವನ್ನು ಕೊಡಲು ಅಥವಾ ಭದ್ರತಾಪತ್ರ ಅಥವಾ ಭದ್ರತಾಪತ್ರಗಳನ್ನು ಪರಿವರ್ತಿಸಲು, ಕ್ರೋಡೀಕರಿಸಲು ಅಥವಾ ಉಪವಿಭಾಗಿಸಲು ನಿರಾಕರಿಸಬಹುದು.

### ರಿಜಿಸ್ಟರುಗಳು, ಪುಸ್ತಕಗಳು ಮತ್ತು ದಸ್ತಾವೇಜುಗಳ ಪರಿಶೀಲನೆ

**22. ದಸ್ತಾವೇಜುಗಳ ಪರಿಶೀಲನೆ.–** ಯಾವನೇ ವ್ಯಕ್ತಿಯು, ನಿಯಮಿಸಬಹುದಾದಂಥ ಸಂದರ್ಭಗಳಲ್ಲಿ ಮತ್ತು ರೀತಿಯಲ್ಲಿ ಮತ್ತು ಅಂಥ ಷರತ್ತುಗಳಿಗೆ ಒಳಪಟ್ಟ ಹೊರತು, ಸರ್ಕಾರದ ಸ್ವಾಧೀನದಲ್ಲಿರುವ ಯಾವುದೇ ಸರ್ಕಾರಿ ಭದ್ರತಾ ಪತ್ರವನ್ನು ಅಥವಾ ಸರ್ಕಾರಿ ಭದ್ರತಾ ಪತ್ರಗಳು ಅಥವಾ ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಪಟ್ಟಂತೆ ಸರ್ಕಾರವು ಇಟ್ಟಿರುವ ಅಥವಾ ಅದರ ಪರವಾಗಿ ಇಟ್ಟುಕೊಂಡು ಬರಲಾಗಿರುವ ಅಥವಾ ನಿರ್ವಹಿಸಿಕೊಂಡು ಬಂದಿರುವ ಯಾವುದೇ ಪುಸ್ತಕ, ರಿಜಿಸ್ಟರು ಅಥವಾ ಇತರೆ ದಸ್ತಾವೇಜನ್ನು ಪರಿಶೀಲಿಸಲು ಅಥವಾ ಅದರಿಂದ ಪಡೆದುಕೊಂಡ ಮಾಹಿತಿಯನ್ನು ಸ್ವೀಕರಿಸಲು ಹಕ್ಕುಳ್ಳವನಾಗಿರತಕ್ಕದ್ದಲ್ಲ.

### ದಂಡ

**23. ದಂಡ.–** (1) ಯಾವನೇ ವ್ಯಕ್ತಿಯು ತನಗಾಗಿ ಅಥವಾ ಯಾವನೇ ಇತರ ವ್ಯಕ್ತಿಗಾಗಿ ಯಾವುದೇ ಸರ್ಕಾರಿ ಭದ್ರತಾ ಪತ್ರಕ್ಕೆ ಸಂಬಂಧಿಸಿದಂತೆ ಬಾಕಿಯಾದ ಬಡ್ಡಿ ಅಥವಾ ಬಂಡವಾಳ ಮೊತ್ತದ ಸಂದಾಯವನ್ನು ಪಡೆಯುವ, ದ್ವಿಪ್ರತಿ ಭದ್ರತಾಪತ್ರದ ಕೊಡುವಿಕೆ ಅಥವಾ ಸರ್ಕಾರಿ ಭದ್ರತಾ ಪತ್ರ ಅಥವಾ ಭದ್ರತಾ ಪತ್ರಗಳ ನವೀಕರಣ, ಪರಿವರ್ತನೆ, ಕ್ರೋಡೀಕರಣ ಅಥವಾ ಉಪವಿಭಾಜಿಸುವಿಕೆಯ ಉದ್ದೇಶಗಳಿಗಾಗಿ ಈ ಅಧಿನಿಯಮದ ಮೇರೆಗೆ ಯಾವುದೇ ಪ್ರಾಧಿಕಾರಕ್ಕೆ ಸುಳ್ಳಾಗಿರುವಂಥ ಮತ್ತು ಅದು ಸುಳ್ಳಾಗಿದೆ ಎಂದು ಅವನು ತಿಳಿದಿರುವಂಥ ಅಥವಾ ನಿಜವಾಗಿರುವುದಾಗಿ ನಂಬದಿರುವಂಥ ನಿರೂಪಣೆಯನ್ನು ಮಾಡಿದರೆ, ಅವನು ಆರು ತಿಂಗಳವರೆಗೆ ವಿಸ್ತರಿಸಬಹುದಾದಂಥ ಅವಧಿಯವರೆಗಿನ ಕಾರಾವಾಸದಿಂದ ಅಥವಾ ಜುಲ್ಮಾನೆಯಿಂದ ಅಥವಾ ಅವೆರಡರಿಂದಲೂ ದಂಡನೀಯನಾಗತಕ್ಕದ್ದು.

(2) ಆ ಸುಳ್ಳು ನಿರೂಪಣೆಯನ್ನು ಯಾವ ಪ್ರಾಧಿಕಾರಕ್ಕೆ ಮಾಡಲಾಯಿತೋ, ಆ ಪ್ರಾಧಿಕಾರದ ದೂರಿನ ಮೇಲೆ ಹೊರತು ಯಾವುದೇ ನ್ಯಾಯಾಲಯವು (1)ನೇ ಉಪಪ್ರಕರಣದ ಮೇರೆಗಿನ ಯಾವುದೇ ಅಪರಾಧವನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳತಕ್ಕದ್ದಲ್ಲ.

## ನಿಯಮಗಳು

**24. ನಿಯಮ ರಚನಾಧಿಕಾರ.–** (1) ಸರ್ಕಾರವು ಪೂರ್ವ ಪ್ರಕಟಣೆಯ ತರುವಾಯ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸಲು ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಿದ ಅಧಿಕಾರಗಳ ಸಾಮಾನ್ಯ ಅನ್ವಯಕ್ಕೆ ಬಾಧಕವಾಗದಂತೆ ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಕ್ಕಾಗಿ ಉಪಬಂಧಿಸಬಹುದು, ಎಂದರೆ:–

(ಕ) ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ ಬಡ್ಡಿಯನ್ನು ಸಂದಾಯ ಮಾಡಬೇಕಾದ ಮತ್ತು ಅದನ್ನು ಸ್ವೀಕರಿಸಬೇಕಾದ ರೀತಿ;

(ಖ) ಸರ್ಕಾರಿ ಭದ್ರತಾ ಪತ್ರಗಳ ಮೇಲೆ ಬಡ್ಡಿಯ ಇನ್ನೂ ಹೆಚ್ಚಿನ ಸಂದಾಯವನ್ನು ಕ್ಲೇಮು ಮಾಡುವುದಕ್ಕೆ ಮುಂಚೆ ಭದ್ರತಾ ಪತ್ರವನ್ನು ನವೀಕರಿಸಬೇಕಾದ ಸಂದರ್ಭಗಳು;

(ಗ) ಸರ್ಕಾರಿ ಭದ್ರತಾ ಪತ್ರಗಳನ್ನು ಭಾರತದಲ್ಲಿನ ದೇಶೀಯ ರಾಜರಿಗೆ ಯಾವ ನಮೂನೆಯಲ್ಲಿ, ಯಾವ ಷರತ್ತುಗಳಿಗೆ ಒಳಪಟ್ಟು ಕೊಡಬಹುದೋ ಆ ನಮೂನೆ ಮತ್ತು ಷರತ್ತುಗಳು;

(ಘ) ದ್ವಿಪ್ರತಿ ಭದ್ರತಾ ಪತ್ರಗಳನ್ನು ಕೊಡುವುದಕ್ಕೆ ಮತ್ತು ಸರ್ಕಾರಿ ಭದ್ರತಾ ಪತ್ರಗಳ ನವೀಕರಣ, ಪರಿವರ್ತನೆ, ಕ್ರೋಡೀಕರಣ ಮತ್ತು ಉಪವಿಭಾಗಿಸುವಿಕೆ–ಇವುಗಳಿಗೆ ಸಂಬಂಧಿಸಿ ಸಂದಾಯ ಮಾಡಬೇಕಾದ ಫೀಜುಗಳು;

(ಙ) ದ್ವಿಪ್ರತಿ ಭದ್ರತಾ ಪತ್ರಗಳಿಗಾಗಿ ಅರ್ಜಿಯನ್ನು ಸಲ್ಲಿಸುವ ವ್ಯಕ್ತಿಗಳು ಹಾಜರುಪಡಿಸಬೇಕಾದಂಥ ರುಜುವಾತು;

(ಚ) 10ನೇ ಪ್ರಕರಣದ (2)ನೇ ಉಪಪ್ರಕರಣದಲ್ಲಿ ಹೇಳಲಾದ ಅಧಿಸೂಚನೆಯನ್ನು ಪ್ರಕಟಿಸುವ ನಮೂನೆ ಮತ್ತು ರೀತಿ ಮತ್ತು ಆ ಪ್ರಕರಣದ (3)ನೇ ಉಪಪ್ರಕರಣದಲ್ಲಿ ಹೇಳಲಾದ ಪಟ್ಟಿಯನ್ನು ಪ್ರಕಟಿಸುವ ರೀತಿ;

(ಛ) 10, 11, 12, 13, 15, 19 ಮತ್ತು 21ನೇ ಪ್ರಕರಣಗಳಲ್ಲಿ ಉಲೇಖಿಸಿದ ಎಲ್ಲಾ ಅಥವಾ ಯಾವುದೇ ಅಧಿಕಾರವನ್ನು ಚಲಾಯಿಸುವ ಮತ್ತು ಎಲ್ಲಾ ಅಥವಾ ಯಾವುದೇ ಕರ್ತವ್ಯವನ್ನು ನೆರವೇರಿಸುವಂಥ ಪ್ರಾಧಿಕಾರ;

(ಜ) 12ನೇ ಪ್ರಕರಣದ ಪರಂತುಕದಲ್ಲಿ ಹೇಳಲಾಗಿರುವ ವಿಚಾರಣೆಯನ್ನು ನಡೆಸುವ ರೀತಿ;

(ಝ) ಧಾರಕನಿಗೆ ಸಂದಾಯ ಮಾಡಬೇಕಾದ ಭದ್ರತಾ ಪತ್ರಗಳನ್ನು ಹೊರತುಪಡಿಸಿ ಭದ್ರತಾ ಪತ್ರಗಳನ್ನು ಅಥವಾ ಪ್ರಾಮಿಸರಿ ನೋಟುಗಳನ್ನು ನವೀಕರಿಸಬೇಕಾದಂಥ ಸಂದರ್ಭಗಳು ಮತ್ತು ರೀತಿ;

(ಞ) ವಿಮೋಚನೆ, ನವೀಕರಣ, ಪರಿವರ್ತನೆ, ಕ್ರೋಡೀಕರಣ ಅಥವಾ ಉಪವಿಭಾಗಿಸುವಿಕೆ–ಇವುಗಳಿಗಾಗಿ ವಶಾವಣೆ ಮಾಡಿದ ಭದ್ರತಾ ಪತ್ರಗಳ ಬಗ್ಗೆ ರಸೀದಿಯನ್ನು ಕೊಡಬೇಕಾದಂಥ ನಮೂನೆ;

(ಟ) ಯಾವ ಷರತ್ತುಗಳಿಗೆ ಒಳಪಟ್ಟು ಭದ್ರತಾ ಪತ್ರಗಳನ್ನು ಪರಿವರ್ತಿಸಬಹುದೋ, ಕ್ರೋಡೀಕರಿಸಬಹುದೋ ಅಥವಾ ಉಪವಿಭಾಗಿಸಬಹುದೋ ಆ ಷರತ್ತುಗಳು;

(ಠ) ಮತಿವಿಕಲರಾಗಿರುವ ಮತ್ತು ತಮ್ಮ ವ್ಯವಹಾರಗಳನ್ನು ನಡೆಸಲು ಅಸಮರ್ಥರಾಗಿರುವ ಅಪ್ರಾಪ್ತ ವಯಸ್ಕರ ಅಥವಾ ಅಂಥ ವ್ಯಕ್ತಿಗಳ ಹೆಸರಿನಲ್ಲಿರುವ ಮತ್ತು ಅವರು ಹೊಂದಿರುವ ಸರ್ಕಾರಿ

ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ ಸಂದಾಯಗಳನ್ನು ಯಾವ ವ್ಯಕ್ತಿಗೆ ಮತ್ತು ಯಾವ ರೀತಿಯಲ್ಲಿ ಮಾಡಬೇಕಾಗಿದೆಯೋ ಆ ವ್ಯಕ್ತಿ ಮತ್ತು ಆ ರೀತಿ;

(ಡ) ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಿಸಿದಂತೆ ಬಾಕಿಯಾದ ಬಡ್ಡಿಯನ್ನು ಅಥವಾ ಬಂಡವಾಳ ಮೊತ್ತವನ್ನು ಸ್ವೀಕರಿಸುವ ಅಥವಾ ದ್ವಿಪ್ರತಿಯ ನವೀಕರಿಸಿದ, ಪರಿವರ್ತಿಸಿದ, ಕ್ರೋಡೀಕರಿಸಿದ ಅಥವಾ ಉಪವಿಭಾಗಿಸಿದ ಭದ್ರತಾಪತ್ರಗಳನ್ನು ಪಡೆಯುವ ವ್ಯಕ್ತಿಗಳಿಂದ ಮೂರನೇ ಪಕ್ಷಕಾರರ ಪ್ರತಿಕೂಲ ಕ್ಲೇಮಿನ ಬಗ್ಗೆ ನಷ್ಟ ಭರ್ತಿ ಪತ್ರಗಳನ್ನು ತೆಗೆದುಕೊಳ್ಳುವುದು;

(ಢ) ಯಾವುದೇ ಕಾರಣದಿಂದ ಬರೆಯಲು ಅಸಮರ್ಥನಾಗಿರುವ ಯಾವನೇ ವ್ಯಕ್ತಿಯ ತಗಾದೆಯ ಮೇಲೆ ಸರ್ಕಾರಿ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟ ಯಾವುದೇ ದಸ್ತಾವೇಜು ಅಥವಾ ಸರ್ಕಾರಿ ಪ್ರಾಮಿಸರಿ ನೋಟಿನ ಮೇಲೆ ಯಾವುದೇ ಹಿಂಬರಹವನ್ನು ಅವನ ಪರವಾಗಿ ಬರೆದುಕೊಡಬಹುದಾದಂಥ ರೀತಿ;

(ಣ) ಸರ್ಕಾರಿ ಸ್ಟಾಕನ್ನು ಹೊಂದಿರುವವರನ್ನು ಅಂಥ ಸ್ಟಾಕುಗಳ ರಿಜಿಸ್ಟರಿನಲ್ಲಿ ನ್ಯಾಸಧಾರಿಗಳೆಂದು ಮತ್ತು ಯಾವುದೇ ನಿರ್ದಿಷ್ಟ ನ್ಯಾಸದ ನ್ಯಾಸಧಾರಿಗಳೆಂದು ಅಥವಾ ಅರ್ಹತೆ ಇಲ್ಲದ ನ್ಯಾಸಧಾರಿಗಳೆಂದು ವಿವರಿಸುವುದು ಮತ್ತು ಹಾಗೆ ವಿವರಿಸಲಾದ ಸ್ಟಾಕನ್ನು ಹೊಂದಿರುವವರು ಕೊಟ್ಟಿರುವ ಮೋಖ್ತ್ಯಾರನಾಮೆಗಳ ಮನ್ನಣೆಯನ್ನು ಸಾಧ್ಯಗೊಳಿಸುವುದು;

(ತ) ಸರ್ಕಾರಿ ಪದಗಳನ್ನು ಹೊರತುಪಡಿಸಿ ಇತರ ಪದಗಳ ಧಾರಕನು ಸರ್ಕಾರಿ ಸ್ಟಾಕನ್ನು ಧಾರಣ ಮಾಡುವುದು ಮತ್ತು ಹಾಗೆ ಧಾರಣ ಮಾಡಿರುವ ಸ್ಟಾಕುಗಳನ್ನು ವರ್ಗಾವಣೆ ಮಾಡಬಹುದಾದಂಥ ರೀತಿ;

(ಥ) ಸರ್ಕಾರಿ ಸ್ಟಾಕುಗಳಿಗೆ ಸಂಬಂಧಪಟ್ಟಂತೆ ದಸ್ತಾವೇಜಗಳನ್ನು ಅನುಪ್ರಮಾಣ ಮಾಡುವ ವಿಧಾನ;

(ದ) ಸಾಮಾನ್ಯವಾಗಿ ದ್ವಿಪ್ರತಿಯ ನವೀಕರಿಸಿದ, ಪರಿವರ್ತಿಸಿದ, ಕ್ರೋಡೀಕರಿಸಿದ ಮತ್ತು ಉಪವಿಭಾಗಿಸಿದ ಭದ್ರತಾ ಪತ್ರಗಳನ್ನು ಕೊಡುವುದಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳು; ಮತ್ತು

(ಧ) 22ನೇ ಪ್ರಕರಣದ ಮೇರೆಗೆ ಯಾವ ಸಂದರ್ಭಗಳಲ್ಲಿ ಮತ್ತು ಯಾವ ರೀತಿಯಲ್ಲಿ ಮತ್ತು ಯಾವ ಷರತ್ತುಗಳಿಗೆ ಒಳಪಟ್ಟು ಭದ್ರತಾ ಪತ್ರಗಳು, ಪುಸ್ತಕಗಳು, ರಿಜಿಸ್ಟರುಗಳು ಮತ್ತು ಇತರೆ ದಸ್ತಾವೇಜುಗಳ ಪರಿಶೀಲನೆಗೆ ಅವಕಾಶ ಕೊಡಬಹುದೋ ಅಥವಾ ಅವುಗಳಿಂದ ಮಾಹಿತಿಯನ್ನು ಕೊಡಬಹುದೋ ಆ ಸಂದರ್ಭಗಳು ಮತ್ತು ರೀತಿ ಮತ್ತು ಷರತ್ತುಗಳು.

(3) (ಣ) ಮತ್ತು (ತ) ಖಂಡಗಳ ಮೇರೆಗೆ ರಚಿಸಿದ ಯಾವುದೇ ನಿಯಮದಲ್ಲಿ ಏನೇ ಇದ್ದರೂ ಅದು ಯಾರೇ ನ್ಯಾಸಧಾರಿಗಳ ನಡುವೆ ಅಥವಾ ಒಂದು ನ್ಯಾಸದ ಮೇರೆಗಿನ ಯಾವುದೇ ನ್ಯಾಸಧಾರಿ ಮತ್ತು ಫಲಾನುಭವಿಗಳ ನಡುವೆ ಆ ನ್ಯಾಸಕ್ಕೆ ಅನ್ವಯವಾಗುವ ಕಾನೂನಿನ ನಿಯಮಗಳು ಮತ್ತು ಆ ನ್ಯಾಸವನ್ನು ರಚಿಸುವ ಲಿಖಿತದ ನಿಬಂಧನೆಗಳಿಗೆ ಅನುಸಾರವಾಗಿ ಅಲ್ಲದೆ ಕಾರ್ಯ ನಿರ್ವಹಿಸಲು ಆ ನ್ಯಾಸಧಾರಿಗಳನ್ನು ಅಧಿಕೃತಗೊಳಿಸುವುದೆಂದು ಭಾವಿಸತಕ್ಕದ್ದಲ್ಲ; ಮತ್ತು ಸರ್ಕಾರವೇ ಆಗಲೀ ಯಾವುದೇ ಸರ್ಕಾರಿ ಸ್ಟಾಕಿನಲ್ಲಿ ಯಾವುದೇ ಹಿತಾಸಕ್ತಿಯನ್ನು ಹೊಂದಿರುವ ಅಥವಾ ಅದನ್ನು ಆರ್ಜಿಸುವ ಯಾವನೇ ವ್ಯಕ್ತಿಯಾಗಲಿ ಯಾವುದೇ ಸರ್ಕಾರಿ ಸ್ಟಾಕು ಅಥವಾ ಯಾವನೇ ಸ್ಟಾಕು ಧಾರಕನಿಗೆ ಸಂಬಂಧಪಟ್ಟಂತೆ ಸರ್ಕಾರವು ಅಥವಾ ಅದರ ಪರವಾಗಿ ಇಟ್ಟುಕೊಂಡು ಬಂದಿರುವ ಯಾವುದೇ ರಿಜಿಸ್ಟರಿನಲ್ಲಿನ ಯಾವುದೇ ನಮೂದು ಅಥವಾ ಸರ್ಕಾರಿ ಸ್ಟಾಕಿಗೆ ಸಂಬಂಧಪಟ್ಟ ಯಾವುದೇ ದಸ್ತಾವೇಜಿನಲ್ಲಿನ ಯಾವುದೇ ವಿಷಯ–ಇವುಗಳ ಕಾರಣ ಮಾತ್ರದಿಂದಲೇ ಯಾವುದೇ ನ್ಯಾಸದ ಅಥವಾ ಯಾವನೇ ಸ್ಟಾಕು ಧಾರಕನ ನಂಬಿಕೆಯ ಸ್ವರೂಪದ ಅಥವಾ ಯಾವುದೇ ಸರ್ಕಾರಿ ಸ್ಟಾಕನ್ನು ಧಾರಣ ಮಾಡುವುದಕ್ಕೆ ಲಗತ್ತಿಸಿದ ಯಾವುದೇ ನಂಬಿಕೆಯ ಬಾಧ್ಯತೆಯ ನೋಟಿಸಿನಿಂದ ಬಾಧಿತಗೊಳ್ಳತಕ್ಕದ್ದಲ್ಲ.

(4) ಈ ಪ್ರಕರಣದ ಮೇರೆಗೆ ರಚಿಸಿದ ನಿಯಮಗಳನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು ಮತ್ತು ಆ ತರುವಾಯ ಅವುಗಳು ಆ ಅಧಿನಿಯಮದಲ್ಲಿ ಅಧಿನಿಯಮಿತವಾಗಿದ್ದಿದ್ದರೆ ಹೇಗೋ ಹಾಗೆ ಪರಿಣಾಮವನ್ನು ಹೊಂದಿರತಕ್ಕದ್ದು.

(5) ಈ ಪ್ರಕರಣದ ಮೇರೆಗೆ ಕೇಂದ್ರ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನ ದಲ್ಲಿರುವಾಗ ಒಂದು ಅಥವಾ ಒಂದಾದಮೇಲೊಂದರಂತೆ ಬರುವ ಎರಡು ಅಥವಾ ಹೆಚ್ಚು ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನ ಅಥವಾ ಒಂದಾದಮೇಲೊಂದರಂತೆ ಬರುವ ಅಧಿವೇಶನಗಳ ನಿಕಟ ತರುವಾಯದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು, ಸಂದಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ; ಆದಾಗ್ಯೂ, ಅಂಥ ಯಾವುದೇ ಮಾರ್ಪಾಡು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟುಮಾಡತಕ್ಕದ್ದಲ್ಲ.

(6) ಈ ಪ್ರಕರಣದ ಮೇರೆಗೆ ರಾಜ್ಯ ಸರ್ಕಾರವು ರಚಿಸಿದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ಕೂಡಲೇ ರಾಜ್ಯ ವಿಧಾನಮಂಡಲದ ಮುಂದೆ ಇಡತಕ್ಕದ್ದು.

**25. ನಿರಸನಗಳು.–** ನಿರಸನಗೊಳಿಸುವ ಅಧಿನಿಯಮ, 1927 (1927ರ 12)ರ ಪ್ರಕರಣ 2 ಮತ್ತು ಅನುಸೂಚಿಯ ಮೂಲಕ ನಿರಸನಗೊಳಿಸಲಾಗಿದೆ.

**26. ಭಾರತೀಯ ಭದ್ರತಾ ಪತ್ರಗಳ ಬಗ್ಗೆ ಉಪಬಂಧ.–** ಸಂದೇಹ ನಿವಾರಣೆಗಾಗಿ ಭಾರತೀಯ ಭದ್ರತಾ ಪತ್ರಗಳಿಗೆ ಸಂಬಂಧಪಟ್ಟಂಥ ಎಲ್ಲಾ ವ್ಯಕ್ತಿಗಳ ಹಕ್ಕುಗಳನ್ನು, ಸರ್ಕಾರಿ ಭದ್ರತೆಗಳಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೂಲಕ ವ್ಯವಹರಿಸಲಾಗುವಂತೆ ಎಲ್ಲಾ ಅಂಥ ಪ್ರಶ್ನೆಗಳಿಗೆ ಸಂಬಂಧಿಸಿದಂತೆ ಈ ಅಧಿನಿಯಮವು ವ್ಯಾಪ್ತವಾಗುವಂಥ ರಾಜ್ಯಕ್ಷೇತ್ರಗಳಲ್ಲಿ ಜಾರಿಯಲ್ಲಿರುವ ಕಾನೂನಿನ ಮೂಲಕ ನಿರ್ಧರಿಸ ತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ.

* * *